ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಏಪ್ರಿಲ್ 07, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 327 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999

ಮದುವೆ ಹಾಗೂ ಶುಭಸಮಾರಂಭಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ
BSC B.S. CHANNABASAPPA & SONS Since - 1938
ಬಿ.ಎಸ್.ಚನ್ನಬಸಪ್ಪ & ಸನ್ಸ್
ಕಾಳಿಕಾದೇವಿ ರಸ್ತೆ | ಪಿ ಜೆ ಬಡಾವಣೆ | ಡೆಂಟಲ್ ಕಾಲೇಜ್ ರಸ್ತೆ ದಾವಣಗೆರೆ



## ಬಿಜೆಪಿ - ಜೆಡಿಎಸ್ ಮೈತ್ರಿಯಿಂದ ಗೆಲುವು

### ಕಾರ್ಯಕರ್ತರ ಸಮ್ಮಿಲನ ಸಮಾರಂಭದಲ್ಲಿ ಮುಖಂಡರ ವಿಶ್ವಾಸ



ಹರಿಹರ, ಏ. 6 - ಜೆಡಿಎಸ್ ಪಕ್ಷವು ಶಿಸ್ತು ಬದ್ದತೆಗೆ ಮಹತ್ವ ನೀಡುತ್ತದೆ. ಬರುವ ಲೋಕಸಭಾ ಚುನಾವಣೆಯಲ್ಲಿ ಪ್ರಾಮಾಣಿಕತೆಯಿಂದ ಮೈತ್ರಿಪಾಲನೆ ಮಾಡಿ, ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಅಧಿಕ ಮತಗಳಿಂದ ಗೆಲ್ಲಿಸುವ ಕೆಲಸ ಮಾಡಲಾಗುವುದು ಎಂದು ಮಾಜಿ ಶಾಸಕ ಹಾಗೂ ಜೆಡಿಎಸ್ ಮುಖಂಡ ಹೆಚ್.ಎಸ್. ಶಿವಶಂಕರ್ ತಿಳಿಸಿದರು.

ಲೋಕಸಭಾ ಚುನಾವಣೆ ನಿಮಿತ್ತ ನಗರದ ಸಿದ್ದೇಶ್ವರ ಪ್ಯಾಲೇಸ್ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಹರಿಹರ ತಾಲ್ಲೂಕು ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಕಾರ್ಯಕರ್ತರ ಸಮ್ಮಿಲನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನ ಮಂತ್ರಿ ಆಗಬೇಕು ಎಂದು ಜೆಡಿಎಸ್ ನಾಯಕರಾದ ಹೆಚ್.ಡಿ. ದೇವೇಗೌಡ, ಹೆಚ್.ಡಿ. ಕುಮಾರಸ್ವಾಮಿ ಅವರು ಕರೆ ನೀಡಿದ್ದಾರೆ. ಅವರ ಮಾತಿಗೆ ಹಾಗೂ ಪಕ್ಷದ ಶಿಸ್ತಿಗೆ ಬದ್ಧವಾಗಿರುತ್ತೇವೆ ಎಂದು ಶಿವಶಂಕರ್ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಉಸ್ತುವಾರಿ ಮಂತ್ರಿಗಳಾದ ನಂತರ ಒಂದು ಬಾರಿ ಕೂಡ ಹರಿಹರ ತಾಲ್ಲೂಕಿಗೆ ಭೇಟಿ ಕೊಟ್ಟು ಅಭಿವೃದ್ಧಿ ಕೆಲಸದ ಬಗ್ಗೆ ಕೇಳಿಲ್ಲ. ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾರ್ಯಗಳು ಶೂನ್ಯವಾಗಿವೆ ಎಂದರು. ಪರಿಷತ್ ಸದಸ್ಯ ರವಿಕುಮಾರ್ ಮಾತನಾಡಿ, (4ನೇ ಪುಟಕ್ಕೆ)

## ರಜೆಯಲ್ಲೂ ಮಕ್ಕಳಿಗೆ ಬಿಸಿಯೂಟ



ದಾವಣಗೆರೆ, ಏ.6- ಬರಗಾಲದಲ್ಲಿ ಮಕ್ಕಳಲ್ಲಿ ಪೌಷ್ಠಿಕಾಂಶದ ಕೊರತೆಯಾಗಬಾರದೆಂದು, ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್ ಹಾಗೂ ಅಕ್ಷರ ದಾಸೋಹ ಕಾರ್ಯಕ್ರಮದಡಿ 31 ಕಂದಾಯ ಜಿಲ್ಲೆಗಳಲ್ಲಿ ಬರ ಘೋಷಣೆಯ ಹಿನ್ನೆಲೆಯಲ್ಲಿ ಏ.11 ರಿಂದ ಮೇ 28ರ ವರೆಗೆ ಮಧ್ಯಾಹ್ನದ ಬಿಸಿಯೂಟ ನೀಡಲು ಸಿದ್ದತೆ ನಡೆಸುವಂತೆ ಜಿ.ಪಂ ಸಿಇಓ ಸುರೇಶ್ ಬಿ.ಇಟ್ನಾಳ್ ಅವರು, ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು. (4ನೇ ಪುಟಕ್ಕೆ)

SRI SAI ANGELS GROUP OF EDUCATIONAL INSTITUTIONS (R.)
Sirgapura, Malalur Post, Chikmagalur - 577133
WE ARE HIRING
JOIN OUR TEAM
HIRING POSITIONS
LECTURERS FOR THE COLLEGE
- Chemistry : M.Sc.(Chemistry)
Should have a min. Experience of 5 years in Coaching for NEET/JEE
- Biology : M.Sc.(Biology/ Zoology)
Should have a min. Experience of 5 years in Coaching for NEET
FOR SCHOOL
- Academic Co-ordinator :
M.Sc.(Maths /Physics / Chem.
Should have a min.Experience
of 10+years in this field of education
- Maths Teacher : M.Sc.(Maths)
Remuneration is not a constraint for deserving candidates
Call or Whatsapp your resume to
9740136375 / 9448944945
EMAIL : karthikmj2007@gmail.com

## ಶ್ರೀಮತಿ ವಿಜಯ ಗಣೇಶಗುಡಿ ನಿಧನ



ದಾವಣಗೆರೆ ನಗರದ ಆಂಜನೇಯ ಬಡಾವಣೆ, (ಡೋರ್ ನಂ. 527 'ಶಿಲ್ಪಶ್ರೀ') 2ನೇ ಕ್ರಾಸ್, ಆಂಜನೇಯ ದೇವಸ್ಥಾನದ ರಸ್ತೆ ವಾಸಿ ದಾವಣಗೆರೆ ನಗರದ ಲಲಿತಕಲಾ ಮಹಾವಿದ್ಯಾಲಯ ಉಪನ್ಯಾಸಕರಾಗಿದ್ದ ದಿ. ಟಿ.ವಿ. ಗಣೇಶಗುಡಿ ಇವರ ಧರ್ಮಪತ್ನಿ

**ಶ್ರೀಮತಿ ವಿಜಯ ಗಣೇಶಗುಡಿ**

ಇವರು ದಿನಾಂಕ 06.04.2024ರ ಶನಿವಾರ ಮಧಾಹ್ನ 2.35ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.04.2024ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಗ್ಲಾಸ್‌ಹೌಸ್ ಹಿಂಭಾಗದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಗಣೇಶಗುಡಿ ಕುಟುಂಬಸ್ಥರು, ಖಡಕ್‌ಭಾವಿ ಕುಟುಂಬಸ್ಥರು, ಮಲಾಬಾದಿ ಕುಟುಂಬಸ್ಥರು
ಮೊ : 80502 17875, 98862 29883

## ನುಡಿದಂತೆ ನಡೆದಿದ್ದೇವೆ ; ಧೈರ್ಯವಾಗಿ ಮತಯಾಚನೆ ಮಾಡೋಣ : ಡಾ. ಪ್ರಭಾ



**ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕರೆ**

ದಾವಣಗೆರೆ, ಏ.6- ವಿಧಾನಸಭೆ ಚುನಾವಣೆ ಪೂರ್ವದಲ್ಲಿ ನೀಡಿದ ಭರವಸೆ ಗಳನ್ನು ಈಡೇರಿಸಿ, ನಾವು ನುಡಿದಂತೆ ನಡೆದಿದ್ದೇವೆ. ಹಾಗಾಗಿ ನಾವೆಲ್ಲರೂ ಧೈರ್ಯವಾಗಿ ಹೋಗಿ ಮತಯಾಚನೆ ಮಾಡಬಹುದು ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಕಾರ್ಯಕರ್ತರನ್ನು ಹುರಿದುಂಬಿಸಿದರು.

ನಗರದ ಕಲ್ಲೇಶ್ವರ ಮಿಲ್ ಆವರಣದಲ್ಲಿ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ವತಿಯಿಂದ ಕರೆಯಲಾಗಿದ್ದ ಪಕ್ಷದ ಪಾಲಿಕೆ ಸದಸ್ಯರು, ವಾರ್ಡ್ ಅಧ್ಯಕ್ಷರು, ಪಕ್ಷದ ವಿವಿಧ ಘಟ ಕಗಳ ಅಧ್ಯಕ್ಷರು, ಪದಾಧಿಕಾರಿಗಳು, ಮಹಿಳಾ ಪ್ರತಿನಿಧಿಗಳು ಮತ್ತು ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು, ಕಾರ್ಯಕರ್ತರು ಪಕ್ಷದ ಗ್ಯಾರಂಟಿಗಳ ಬಗ್ಗೆ ಮತದಾರರಿಗೆ ವಿವರಿಸಿ ಹೇಳಬೇಕು. (2ನೇ ಪುಟಕ್ಕೆ)

## ಕಾರ್ಮಿಕನ ಬಡಿದು ಹತ್ಯೆ

ಕೊಚ್ಚಿ, ಏ. 6 - ಕೇರಳದ ಮುವಟ್ಟುಪುಳ ಎಂಬಲ್ಲಿ ವಲಸೆ ಕಾರ್ಮಿಕರೊಬ್ಬರನ್ನು ಬಡಿದು ಹತ್ಯೆಗೈದ ಘಟನೆ ನಡೆದಿದೆ.

ಅರುಣಾಚಲ ಪ್ರದೇಶದ 24 ವರ್ಷದ ಅಶೋಕ್ ದಾಸ್ ಎಂಬುವವರನ್ನು ಎರಡು ದಿನಗಳ ಹಿಂದೆ ಹತ್ಯೆ ಮಾಡಲಾಗಿದ್ದು, ಈ ಸಂಬಂಧ ಹತ್ತು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಕೆಲಸ ಹುಡುಕಿಕೊಂಡು ಕೇರಳಕ್ಕೆ ಬಂದಿದ್ದ ದಾಸ್, ಮುವಟ್ಟುಪುಳದಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು.

ಇದೇ ಪ್ರದೇಶದಲ್ಲಿರುವ ಮಾಜಿ ಗೆಳತಿಯನ್ನು ಭೇಟಿ ಮಾಡಲು ತೆರಳಿದ್ದ ದಾಸ್ ಅವರನ್ನು ಸ್ಥಳೀಯರ ಗುಂಪು ಕಂಬಕ್ಕೆ ಕಟ್ಟಿ (4ನೇ ಪುಟಕ್ಕೆ)

## ತೈವಾನ್ ಭೂಕಂಪ 600ಕ್ಕೂ ಹೆಚ್ಚು ಜನ ಅತಂತ್ರ

ತೈಪೈ, ಏ. 6 - ತೈವಾನ್‌ನಲ್ಲಿ ಭೂಕಂಪ ಸಂಭವಿಸಿ ಮೂರು ದಿನ ಉರುಳಿದರೂ 600ಕ್ಕೂ ಹೆಚ್ಚು ಜನರು ಅತಂತ್ರರಾಗಿದ್ದಾರೆ.

ಟರೊಕೊ ಪಾರ್ಕ್‌ನಲ್ಲಿರುವ ಹೋಟೆಲ್ ಒಂದರಲ್ಲಿ 450 ಜನ ಅತಂತ್ರರಾಗಿದ್ದಾರೆ. ಉಳಿದವರು ಭೂಕುಸಿತ ಹಾಗೂ ಇತರೆ ಕಾರಣಗಳಿಂದಾಗಿ ಅತಂತ್ರರಾಗಿದ್ದಾರೆ.

25 ವರ್ಷಗಳಲ್ಲೇ ಅತ್ಯಂತ ತೀವ್ರವಾದ ಭೂಕಂಪದಲ್ಲಿ 12 ಜನರು ಮೃತಪಟ್ಟಿದ್ದಾರೆ ಹಾಗೂ ಹತ್ತು ಜನ ಕಣ್ಮರೆಯಾಗಿದ್ದಾರೆ.

## ಹಳ್ಳಿಹಾಳ್ ಗ್ರಾಮದ ಹೆಚ್.ಟಿ. ಹನುಮನಗೌಡ್ರು ನಿಧನ



ಹರಿಹರ ತಾಲ್ಲೂಕಿನ ಹಳ್ಳಿಹಾಳ್ ಗ್ರಾಮದ ದಿ.ಊರಮುಂದ್ಲರ ತಿಮ್ಮನಗೌಡ್ರು ಅವರ ಪುತ್ರ ಹಾಗೂ ಜಿಗಳಿ ವಿ ಎಸ್ ಎಸ್ ಎನ್ ಮಾಜಿ ಅಧ್ಯಕ್ಷರೂ ಆದ

**ಹೆಚ್. ಟಿ. ಹನುಮನಗೌಡ್ರು (62 ವರ್ಷ)**

ಇವರು ದಿನಾಂಕ 06-04-2024 ನೇ ಶನಿವಾರ ಸಂಜೆ 7-30 ಕ್ಕೆ ಅನಾರೋಗ್ಯದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಸಹೋದರರು, ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07-04-2024 ನೇ ಭಾನುವಾರ ಮಧ್ಯಾಹ್ನ 1 ಗಂಟೆಗೆ ಹಳ್ಳಿಹಾಳ್ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು :
ಪತ್ನಿ : ಶ್ರೀಮತಿ ಶಿವಲಿಂಗಮ್ಮ, ಪುತ್ರರಾದ : ನಿರಂಜನ್, ಆದಿತ್ಯ
ಸಹೋದರರಾದ : ಹೆಚ್.ಟಿ. ಶಾಂತನಗೌಡ್ರು, ಹೆಚ್.ಟಿ. ಪರಮೇಶ್ವರಪ್ಪ
ಶ್ರೀಮತಿ ಭಾರತಿ ಕೊಂ. ದಿ. ಡಾ. ಹೆಚ್.ಟಿ. ಬಸವನಗೌಡ್ರು
ಮತ್ತು ಮಕ್ಕಳು, ಅಳಿಯಂದಿರು ಹಾಗೂ ಊರಮುಂದ್ಲರ ವಂಶಸ್ಥರು,
ಹಳ್ಳಿಹಾಳ್ ಗ್ರಾಮಸ್ಥರು ಮತ್ತು ಬಂಧು- ಮಿತ್ರರು

Narayana Health
Take Care
ನಿಮ್ಮೊಂದಿಗೆ ನಿಮ್ಮ ಹತ್ತಿರ
NEAR
ನಾರಾಯಣ ಎಮರ್ಜೆನ್ಸಿ ಆಂಬ್ಯುಲೆನ್ಸ್ ರೆಸ್ಪಾನ್ಸ್




24 x 7 ಎಲ್ಲಾ ವೈದ್ಯಕೀಯ ಅಗತ್ಯತೆಗಳಿಗಾಗಿ ಒಂದೇ ನಂಬರ್
1800 309 0309
ಎಸ್‌ಎಸ್ ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್, ದಾವಣಗೆರೆ

# ಚುನಾವಣೆ ಯಶಸ್ವಿಗೆ ಅಣಕು ಮತದಾನದಲ್ಲಿ ಸಿಆರ್‌ಸಿ ಅತ್ಯವಶ್ಯ

## ಸೆಕ್ಟರ್ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್



ದಾವಣಗೆರೆ, ಏ. 6 - ಲೋಕಸಭಾ ಚುನಾವಣೆ ಮತದಾನವು ಮೇ 7 ರಂದು ನಡೆಯಲಿದೆ. ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬಳಕೆ ಮಾಡಲಾಗುತ್ತಿದ್ದು ಮತದಾನ ಆರಂಭಕ್ಕೂ ಮೊದಲು ನಡೆಯುವ ಅಣಕು ಮತದಾನದ ವೇಳೆ ಸಿಆರ್‌ಸಿ ಬಹಳ ಮಹತ್ವಪೂರ್ಣವಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಸೆಕ್ಟರ್ ಅಧಿಕಾರಿಗಳು ಹಾಗೂ ಮಾಸ್ಟರ್ ಟ್ರೈನರ್‌ಗಳಿಗೆ ಏರ್ಪಡಿಸಲಾದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ನಾಡಿದ್ದು ದಿನಾಂಕ 8 ರಂದು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಮತದಾನ ಕರ್ತವ್ಯದಲ್ಲಿ ಭಾಗವಹಿಸುವ ಎಲ್ಲಾ ಅಧಿಕಾರಿಗಳು ಹಾಗೂ ಮತದಾನ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿದೆ. ಈ ತರಬೇತಿಯಲ್ಲಿ ಸೆಕ್ಟರ್ ಅಧಿಕಾರಿಗಳು ಹಾಗೂ ಮಾಸ್ಟರ್ ಟ್ರೈನರ್‌ಗಳು ಭಾಗವಹಿಸಿ ಮತದಾನ ಸಿಬ್ಬಂದಿಗಳಿಗೆ ತರಬೇತಿ ನೀಡುವರು.

**ಮತದಾನ ಯಶಸ್ಸು ಸಿಆರ್‌ಸಿ ಮೇಲಿದೆ ;** ಮತದಾನಕ್ಕೆ ವಿದ್ಯುನ್ಮಾನ ಮತಯಂತ್ರ ಬಳಕೆ ಮಾಡುತ್ತಿರುವುದರಿಂದ ಮೇ 7 ರಂದು ಮತದಾನಕ್ಕೂ ಮುಂಚಿತವಾಗಿ ಮತಗಟ್ಟೆಯಲ್ಲಿ ಏಜೆಂಟರ ಸಮ್ಮುಖ ಅಣಕು ಮತದಾನ ನಡೆಯುತ್ತದೆ.

ನಂತರ ಬ್ಯಾಲೆಟ್ ಕ್ಲಿಯರ್ ಮಾಡಿ ರಿಸೆಲ್ಟ್ ಕ್ಲೋಸ್ ಮಾಡುವುದು ಬಹಳ ಮುಖ್ಯವಾಗಿರುತ್ತದೆ. ಒಂದು ವೇಳೆ ಮತಗಟ್ಟೆ ಅಧಿಕಾರಿ ಇದನ್ನು ಕ್ಲಿಯರ್ ಮಾಡದಿದ್ದಲ್ಲಿ ಎಣಿಕೆಯ ವೇಳೆ ಸಮಸ್ಯೆಯಾಗುತ್ತದೆ. ಮತದಾನಕ್ಕೂ ಮೊದಲು ಸಮಚಿತ್ತರಾಗಿ, ಯಾವುದೇ ಗೊಂದಲ, ವಿವಾದಗಳಿಗೆ ಆಸ್ಪದ ನೀಡದೆ ಸರಾಗವಾಗಿ ಮತದಾನ ಆರಂಭವಾಗಿ ಮುಕ್ತಾಯವಾಗಬೇಕು.

ಈ ನಿಟ್ಟಿನಲ್ಲಿ ಏ.8 ರಂದು ಏರ್ಪಡಿಸಲಾದ ಮತದಾನ ಸಿಬ್ಬಂದಿಯ ತರಬೇತಿಯಲ್ಲಿ ಸರಿಯಾಗಿ ತಿಳಿಸಿಕೊಡಲು ಸೂಚಿಸಿದರು.

ಮತದಾನ ಕಾರ್ಯ ಸುಗಮವಾಗಿ ನಡೆಯಲು ಸೆಕ್ಟರ್ ಅಧಿಕಾರಿಗಳ ಜವಾಬ್ದಾರಿ ಹೆಚ್ಚಿರುತ್ತದೆ. ಈ ನಿಟ್ಟಿನಲ್ಲಿ ಯಾವುದೇ ಸೆಕ್ಟರ್ ಅಧಿಕಾರಿಗಳು ಕರ್ತವ್ಯ ನಿರ್ಲಕ್ಷ್ಯತೆ ತೋರದೆ ಶ್ರದ್ದೆಯಿಂದ ಕೆಲಸ ಮಾಡಬೇಕೆಂದರು.

ಜಿಲ್ಲೆಯಲ್ಲಿ ಒಟ್ಟು 164 ಸೆಕ್ಟರ್ ಅಧಿಕಾರಿಗಳನ್ನು ನೇಮಕ ಮಾಡಿದ್ದು ಜಗಳೂರು 31, ಹರಿಹರ 22, ದಾವಣಗೆರೆ ಉತ್ತರ 21, ದಕ್ಷಿಣ 18, ಮಾಯಕೊಂಡ 25, ಚನ್ನಗಿರಿ 23, ಹೊನ್ನಾಳಿ 24 ಸೆಕ್ಟರ್ ಅಧಿಕಾರಿಗಳು ಕೆಲಸ ನಿರ್ವಹಿಸುತ್ತಿದ್ದಾರೆ.

ಅಪರ ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್. ಬಳ್ಳಾರಿ ಹಾಗೂ ಎಲ್ಲಾ ಸಹಾಯಕ ಚುನಾವಣಾಧಿಕಾರಿಗಳು ಉಪಸ್ಥಿತರಿದ್ದರು.

## ಗ್ರಾಮಸ್ಥರ ಲೆಕ್ಕ ಪರಿಶೋಧನೆ ವಿರುದ್ಧ ಗ್ರಾಮ ಸೇವಕರ ಅನಿರ್ದಿಷ್ಟಾವಧಿ ರಜೆ

ಪಾಲ್ಘರ್, ಏ. 6 - ಮಹಾರಾಷ್ಟ್ರದ ಪಾಲ್‌ಘಾರ್ ಜಿಲ್ಲೆಯಲ್ಲಿ ಗ್ರಾಮಸ್ಥರು ಜಲ ಜೀವನ್ ಮಿಷನ್ ಕಾಮಗಾರಿಗಳ ಲೆಕ್ಕಪರಿಶೋಧನೆ ನಡೆಸಲು ಮುಂದಾಗಿರುವುದನ್ನು ವಿರೋಧಿಸಿ, 370ಕ್ಕೂ ಹೆಚ್ಚು ಗ್ರಾಮ ಸೇವಕರು ಅನಿರ್ದಿಷ್ಟಾವಧಿ ರಜೆ ಮೇಲೆ ತೆರಳಿದ್ದಾರೆ.

ಜಲ ಜೀವನ್ ಮಿಷನ್ ಯೋಜನೆಯಲ್ಲಿ ತಾವು ಯಾವುದೇ ಪಾತ್ರ ಹೊಂದಿಲ್ಲ. ಆದರೂ, ಗ್ರಾಮಸ್ಥರು ತಮ್ಮನ್ನು ದೂರುತ್ತಿದ್ದಾರೆ ಎಂದು ಗ್ರಾಮ ಸೇವಕರು ಹೇಳಿದ್ದಾರೆ. ಗ್ರಾಮೀಣ ಭಾಗಕ್ಕೆ ಕುಡಿಯುವ ನೀರು ಪೂರೈಸಲು ಜಲ ಜೀವನ್ ಮಿಷನ್ ಯೋಜನೆ ರೂಪಿಸಲಾಗಿದೆ.

ಸರ್ಕಾರೇತರ ಸಂಘಟನೆಯೊಂದರ ನೇತೃತ್ವದಲ್ಲಿ ಪಾಲ್ಘರ್ ಗ್ರಾಮಸ್ಥರು ಜಲ ಜೀವನ್ ಮಿಷನ್ ಯೋಜನೆಯಲ್ಲಿ ಲೋಪಗಳನ್ನು ಪತ್ತೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ. ಇದನ್ನು ವಿರೋಧಿಸಿ 16 ಇಂಜಿನಿ ಯರ್‌ಗಳು ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಈಗಾಗಲೇ ಎಚ್ಚರಿಸಿದ್ದಾರೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಭಾಂಗಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಡಾ.ಮಾವಿಶೆಟ್ಟರ್, ಡಾ.ಶರತ್‌ರಾಜ್. ಕೆ.ಆರ್, ಡಾ.ಸಿ.ಎನ್.ಕೋಟಿಹಾಳ್, ಡಾ.ಎ.ಎನ್.ಸುಂದರೇಶ್, ಡಾ.ಆರತಿ ಸುಂದರೇಶ್, ಡಾ.ಜಿ.ಎಸ್.ಗಿರೀಶ್, ಡಾ.ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್.ರಂಗರಾಜನ್ ಮತ್ತಿತರರು ತಪಾಸಣೆ ನಡೆಸಲಿದ್ದಾರೆ.

## ಬಾಬು ಜಗಜೀವನರಾಂ ಚಿಂತನೆಗಳು ಎಲ್ಲಾ ಕಾಲಕ್ಕೂ ಮಾದರಿ



**ಹರಪನಹಳ್ಳಿ**

ಹರಪನಹಳ್ಳಿ, ಏ. 6- ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂ ಅವರ 117 ನೇ ಜಯಂತಿಯನ್ನು ತಹಶೀಲ್ದಾರರ ಕಛೇರಿ ಸಭಾಂಗಣದಲ್ಲಿ ಆಚರಿಸಲಾಯಿತು.

ಲೋಕಸಭೆ ಚುನಾವಣೆ ನೀತಿ ಸಂಹಿತೆಯ ಜಾರಿ ಹಿನ್ನೆಲೆಯಲ್ಲಿ ಜಯಂತಿಯನ್ನು ಪಟ್ಟಣದ ತಹಶೀಲ್ದಾರ್ ರವರ ಕಛೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು ಎಂದು ಉಪ ವಿಭಾಗಧಿಕಾರಿ ಚಿದಾನಂದ ಗುರುಸ್ವಾಮಿ ತಿಳಿಸಿದರು.

ನಂತರ ಅವರು ಮಾತನಾಡಿ, ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ, ಭಾರತದ ಮಾಜಿ ಉಪ ಪ್ರಧಾನ ಮಂತ್ರಿಗಳಾದ ಡಾ.ಬಾಬು ಜಗಜೀವನರಾಂ ಅವರ ಆದರ್ಶ, ಚಿಂತನೆಗಳು ಎಲ್ಲಾ ಕಾಲಕ್ಕೂ ಮಾದರಿಯಾಗಿದ್ದು, ಅವರ ವ್ಯಕ್ತಿತ್ವ ಹಾಗೂ ಜೀವನ ಚರಿತ್ರೆಯನ್ನು ಯುವ ಪೀಳಿಗೆಗೆ ಪರಿಚಯಿಸಬೇಕಿದೆ ಎಂದು ಸ್ಮರಿಸಿದರು.

ತಹಶೀಲ್ದಾರ್ ಬಿ.ವಿ.ಗಿರೀಶ್, ತಾ.ಪಂ. ಕಾರ್ಯನಿರ್ವಾಣಾಧಿಕಾರಿ ಚಂದ್ರಶೇಖರ ವೈ.ಎಚ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ರೇಣುಕಾದೇವಿ, ಹಿಂದುಳಿದ ಕಲ್ಯಾಧಿಕಾರಿ ವಿಜಯಲಕ್ಷ್ಮಿ ಹತ್ತಿಕಾಳ್, ಎನ್. ಜಿ.ಬಸವರಾಜ್, ರಘು.ಸಿ.ಇ, ರವಿಗೌಡ, ಡಿ. ಮಂಜುನಾಥ, ರವಿಕುಮಾರ್, ರೇಣುಕಾರಾಜ, ಯಲ್ಲಮ್ಮ, ಮಹಾದೇವಪ್ಪ, ಶಿವಕುಮಾರ್, ನರಸಮ್ಮ, ಪುಷ್ಪಾವತಿ, ಸುಮಾ, ಎಸ್.ಟಿ. ಮ್ಯಾನೇಜರ್ ಇಬ್ರಾಹಿಂ, ಡಿ.ಎಸ್.ಎಸ್. ಸಂಚಾಲಕ ಕಬ್ಬಹಳ್ಳಿ ಮೈಲಾಪ್ಪ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ ಮತ್ತು ಇತರೆ ಇಲಾಖೆಯ ಅಧಿಕಾರಿಗಳು, ಇಲಾಖಾ ಸಿಬ್ಬಂದಿಗಳು ಹಾಗೂ ವಿವಿಧ ಸಂಘಟನೆಯ ಮುಖಂಡರು ಭಾಗವಹಿಸಿದ್ದರು.

## ಧೈರ್ಯವಾಗಿ ಮತಯಾಚನೆ ಮಾಡೋಣ : ಪ್ರಭಾ ಎಸ್ಸೆಸ್ಸೆಂ



(1ನೇ ಪುಟದಿಂದ) ಅಲ್ಲದೇ ಶಿಸ್ತಿನಿಂದ ಪ್ರತಿಯೊಬ್ಬ ಮತದಾರರ ಬಳಿ ಹೋಗಿ ಅದನ್ನು ಮನವರಿಕೆ ಕೂಡಾ ಮಾಡಬೇಕು. ಸರ್ಕಾರ ಬಂದ ಕೇವಲ 10 ತಿಂಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರ ಒಂದರಲ್ಲಿಯೇ ಪ್ರತಿ ತಿಂಗಳು 17.47 ಕೋಟಿ ರೂ. ಗ್ಯಾರಂಟಿ ಯೋಜನೆ ಹಣ ಫಲಾನುಭವಿಗಳಿಗೆ ಸರ್ಕಾರದಿಂದ ಬರುತ್ತಿದೆ ಎಂದು ಅಂಕಿ-ಅಂಶ ಸಮೇತ ಡಾ.ಪ್ರಭಾ ಅವರು ವಿವರಿಸಿದರು.

ಸರ್ಕಾರಿ ಇಲಾಖೆ ಸಂಬಂಧ ಯಾವುದೇ ಸಮಸ್ಯೆಗಳಿರಲಿ ಅಥವಾ ನಮ್ಮ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳ ಯಾವುದೇ ಸಮಸ್ಯೆಗಳಿರಲಿ ಅವನ್ನು ಬಗೆಹರಿಸಲು ನಾವು ನಿಮ್ಮ ಜೊತೆಗಿದ್ದೇವೆ ಎಂದು ತಿಳಿಸಿದರು. ಅಪ್ಪಾಜಿ ಶಾಮನೂರು ಶಿವಶಂಕರಪ್ಪನವರು ಕೋವಿಡ್ ಸಂದರ್ಭದಲ್ಲಿ ಆರು ಕೋಟಿ ಖರ್ಚು ಮಾಡಿ ಸರ್ಕಾರಕ್ಕೂ ಮೊದಲು ಕೋವಿಡ್ ವ್ಯಾಕ್ಸಿನೇಷನ್ ನೀಡಿದ್ದಾರೆ. ಹೀಗೆ ಸದಾ ನಿಮ್ಮ ಜೊತೆಗಿರುವ ನಮಗೆ ಈ ಬಾರಿ ಗೆಲ್ಲಿಸುವಲ್ಲಿ ಕಾರ್ಯಕರ್ತರ ಪಾತ್ರ ಹಿರಿದಾಗಿದೆ ಎಂದು ಹೇಳಿದರು.

ಚುನಾವಣೆ ಮುಗಿಯುವವರೆಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಎಚ್ಚರಿಕೆ ಯಿಂದ ಇರುವಂತೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಧ್ಯಕ್ಷ ಆಯೂಬ್ ಪೈಲ್ವಾನ್, ಮೇಯರ್ ವಿನಾಯಕ ಪೈಲ್ವಾನ್, ಮುಖಂಡರಾದ ದಿನೇಶ್ ಕೆ.ಶೆಟ್ಟಿ, ಬಿ.ಹೆಚ್.ವೀರಭದ್ರಪ್ಪ, ಕೆ.ಜಿ.ಶಿವಕುಮಾರ್, ಎಸ್. ಮಲ್ಲಿಕಾರ್ಜುನ್, ಚಂದ್ರು ಡೋಲಿ ಮತ್ತಿತರರು ಉಪಸ್ಥಿತರಿದ್ದರು.

## ನಾಳೆ ಬೆಳಗಾವಿಯಲ್ಲಿ 'ದೇಶ ಉಳಿಸಿ ಸಂಕಲ್ಪ' ಬೃಹತ್ ಸಮಾವೇಶ

ರಾಣೇಬೆನ್ನೂರು, ಏ. 6- ಸನಾತನತೆಯ ಹೆಸರಿನಲ್ಲಿ ನಡೆಸುವ ಅಸಮಾನತೆ, ಜಾತಿವಾದ ಮತ್ತು ಯಜಮಾನಿಕೆ ವ್ಯವಸ್ಥೆಯನ್ನು ಮೂಲ ಬಂಡವಾಳ ಮಾಡಿಕೊಂಡಿರುವ ಮೋದಿ ಆಡಳಿತದ ವಿರುದ್ಧ 12 ನೇ ಶತಮಾನದ ವೈಚಾರಿಕ ಕ್ರಾಂತಿಯಂತೆ ಜನಪರ ಹೋರಾಟ ಮಾಡಲು 'ದೇಶ ಉಳಿಸಿ ಸಂಕಲ್ಪ ಸಮಾವೇಶ' ನಾಡಿದ್ದು ದಿನಾಂಕ 8 ರಂದು ಮಧ್ಯಾಹ್ನ 3 ಗಂಟೆಗೆ ಬೆಳಗಾವಿಯ ಮಹಾತ್ಮಗಾಂಧಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಯಾತ್ರೆಯ ಸಂಘಟಕದ ಹೊನ್ನಪ್ಪ ಮರಿಯಮ್ಮನವರ ಹೇಳಿದರು.

ವಿನಾಯಕ ನಗರದ ಕಾಂಗ್ರೆಸ್ ಕಛೇರಿಯಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಪುರೋಗಾಮಿ ನಡಿಗೆಯನ್ನು ಸಹಿಸದ ಬಂಡವಾಳ ಶಾಹಿ ಹಾಗೂ ಜಾತಿವಾದದ ಶಕ್ತಿಗಳು ಹೂಡಿರುವ ಒಳಸಂಚಿನಿಂದ ದೇಶ ವಿಭಜಿಸುವ ಹಾಗೂ ರಾಜಕಾರಣ ನಡೆಸಿ ಗದ್ದುಗೆ ಹಿಡಿಯುವ ಷಡ್ಯಂತರದ ವಿರುದ್ದ ಮತ್ತು ಸಂವಿಧಾನದ ಉಳಿವು ಹಾಗೂ ಸರ್ವಜನಾಂಗದ ಶಾಂತಿಯ ತೋಟದ ರಕ್ಷಣೆಗಾಗಿ ಈ ಸಮಾವೇಶ ಕೈಗೊಳ್ಳಲಾಗಿದೆ ಎಂದು ಹೊನ್ನಪ್ಪ ಹೇಳಿದರು.

ರಾಜ್ಯದಲ್ಲಿ 3 ಭಾಗದಲ್ಲಿ ಈ ಯಾತ್ರೆ ಕೈಗೊಂಡಿದ್ದು, ರಾಜ್ಯಾದ್ಯಂತ ಸಂಚರಿಸಿ ಜನತೆಯಲ್ಲಿ ಮೋದಿ ಆಡಳಿತದ ವೈಖರಿಯ ಬಗ್ಗೆ ಪರಿಚಯಿಸಿ ದಿನಾಂಕ 8 ರಂದು ಬೆಳಗಾವಿಗೆ ಆಗಮಿಸಿ, ಮಧ್ಯಾಹ್ನ 3 ಗಂಟೆಗೆ ಮಹಾತ್ಮಾ ಗಾಂಧಿ ಸಭಾಂಗಣದಲ್ಲಿ ಸಮಾವೇಶ ನಡೆಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ರವೀಂದ್ರಗೌಡ ಪಾಟೀಲ, ಚಂದ್ರಪ್ಪ ಬೇಡರ, ಬಸವರಾಜ ತಳವಾರ, ಸಣ್ಣ ತಮ್ಮಪ್ಪ ಬಾರ್ಕಿ, ನಾಗರಾಜ ಕುಸಗೂರ, ಬೀರಪ್ಪ ಲಮಾಣಿ ಮತ್ತಿತರರಿದ್ದರು.

## ಮಲೇಬೆನ್ನೂರಿನಲ್ಲಿ ಬಾಬು ಜಗಜೀವನ್ ರಾಮ್ ಜಯಂತಿ ಆಚರಣೆ



ಮಲೇಬೆನ್ನೂರು, ಏ. 6 - ಇಲ್ಲಿನ ನಾಡ ಕಛೇರಿ ಮತ್ತು ಪುರಸಭೆ ಕಾರ್ಯಾಲಯದಲ್ಲಿ ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ ಜಯಂತಿಯನ್ನು ಲೋಕಸಭಾ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲಾಯಿತು. ಉಪ ತಹಸೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮತ್ತು ನಾಡ ಕಛೇರಿ ಹಾಗೂ ಪುರಸಭೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ಬಿ.ಜಿ. ಪಾಟೀಲರ ಆರೋಗ್ಯ ವಿಚಾರಿಸಿದ ಕೆ.ಬಿ. ಕೋಳಿವಾಡ





ರಾಣೇಬೆನ್ನೂರು, ಏ.6- ವಯೋಸಹಜ ಕಾಯಿಲೆಯಿಂದ ಬಳಲುತ್ತಿರುವ ತಮ್ಮ ಸಮಕಾಲೀನ ಹಿರಿಯರು, ಧಾರವಾಡ ಜಿಲ್ಲಾ ಪರಿಷತ್ ಪ್ರಥಮ ಅಧ್ಯಕ್ಷರಾಗಿದ್ದ, ಮಾಜಿ ಶಾಸಕ ಡಾ. ಬಿ.ಜಿ. ಪಾಟೀಲರ ಬೆಂಗಳೂರಿನ ನಿವಾಸದಲ್ಲಿ ಅವರನ್ನು ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ. ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಕೆಪಿಸಿಸಿ ಸದಸ್ಯ ಬಸನಗೌಡ ಮರದ, ಜಿ.ಪಂ. ಮಾಜಿ ಸದಸ್ಯ ಶಿವಾನಂದ ಕನ್ನಪ್ಪಳವರ ಹಾಗೂ ಕರೇಗೌಡ ಬಾಗೂರ, ಪಾಟೀಲರ ಪುತ್ರ ಪ್ರಭು ಮತ್ತಿತರರಿದ್ದರು.

**ಶಂಕರ್-ಕೋಳಿವಾಡ ಭೇಟಿ:** ಇಂದು ಕಾಂಗ್ರೆಸ್ ಸೇರಿದ ಮಾಜಿ ಸಚಿವ ಆರ್. ಶಂಕರ್ ಬೆಂಗಳೂರಿನಲ್ಲಿ ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ ಅವರ ಮನೆಗೆ ತೆರಳಿ ಸಮಾಲೋಚನೆ ನಡೆಸಿದರು. ಹಿತೈಷಿ ರಾಜು ಅಡಿವೆಪ್ಪನವರ ಇದ್ದರು.

## ವಯೋವೃದ್ಧೆ ರಕ್ಷಿಸಿ ಮಾನವೀಯತೆ ಮೆರೆದ ಜಿಲ್ಲಾ ನ್ಯಾಯಾಧೀಶರು



ದಾವಣಗೆರೆ, ಏ.6- ಬೆಣ್ಣೆ ನಗರಿ, ಶಿಕ್ಷಣ ನಗರಿ ಎಂದೆಲ್ಲ ಕರೆಯುವ ನಗರದಲ್ಲಿ ಲಕ್ಷಾಂತರ ಶ್ರೀಮಂತರು, ಮಧ್ಯಮ ವರ್ಗದವರು, ಬಡವರು ಮತ್ತು ಕಡು ಬಡವರ ವಾಸ ಮಾಡುತ್ತಿದ್ದಾರೆ. ದಿನನಿತ್ಯದ ಬದುಕಿನ ಜಂಜಾಟಗಳ ನಾಗಾಲೋಟದಲ್ಲಿ ಕೆಲವು ಸಣ್ಣ ಸಣ್ಣ ವಿಷಯಗಳು ನಾಗರಿಕ ಸಮಾಜದ ಕಣ್ಣಿಗೆ ಬಿದ್ದರೂ ಹೃದಯಕ್ಕೆ ತಟ್ಟುವುದಿಲ್ಲ.

ಆದರೆ, ಶಾಮನೂರು ಕೆಳ ಸೇತುವೆಯನ್ನೇ ಸೂರು ಮಾಡಿಕೊಂಡು ಪುಟ್ಟ ನಾಯಿಮರಿಯೊಂದಿಗೆ ವಾಸವಿದ್ದ ವಯೋವೃದ್ಧೆಯನ್ನು ರಕ್ಷಿಸಿ, ಸೂಕ್ತ ವೈದ್ಯಕೀಯ ಚಿಕಿತ್ಸೆಯೊಂದಿಗೆ ಮಹಿಳಾ ರಕ್ಷಣಾಲಯಕ್ಕೆ ಕಳುಹಿಸಿ ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಮಾನವೀಯತೆ ಮೆರೆದಿದ್ದಾರೆ.

ನ್ಯಾಯಾಲಯಕ್ಕೆ ಸಂಚರಿಸುವ ದಾರಿಯಲ್ಲಿ ಮಳೆ, ಗಾಳಿ ಮತ್ತು ಧೂಳಿನ ನಡುವೆ ವಾಸವಿದ್ದ ಈ ವಯೋವೃದ್ಧೆಯನ್ನು ಗಮನಿಸಿದ್ದಾರೆ. ಇಂದು ತಮ್ಮ ಇಲಾಖೆಯ ಇನ್ನೋರ್ವ ನ್ಯಾಯಾಧೀಶರಾದ ಮಹಾವೀರ ಕರೆಣ್ಣನವರ ಇವರೊಂದಿಗೆ ಸೇರಿ ಮಹಿಳೆಯ ಘನತೆಯ ಬದುಕಿಗೆ ಆಸರೆಯಾಗಿದ್ದಾರೆ.

ಮೊದ ಮೊದಲು ತೀವ್ರ ಪ್ರತಿರೋಧ, ಆಕ್ರೋಶ, ಕೌಟುಂಬಿಕವಾಗಿ ತನ್ನ ಮೇಲಾದ ಆಕ್ರಮಣಗಳನ್ನು ಅಸ್ಪಷ್ಟವಾಗಿ ಹೇಳುತ್ತಿದ್ದ ಆ ವಯೋವೃದ್ಧೆ, ಉಂಡ ಸಂಕಟಗಳ ಕಾರಣಕ್ಕೋ ಏನೋ ತನ್ನೆದುರಿಗೆ ನಿಂತು ತನ್ನನ್ನು ವಿಚಾರಿಸುತ್ತಿದ್ದ ನ್ಯಾಯಾಧೀಶರ ಮೇಲೆಯೇ ಹರಿಹಾಯ್ದರೂ ಸಹ, ಸಹನೆ ಕಳೆದುಕೊಳ್ಳದೆ ಸಮಚಿತ್ತದಿಂದ ಅವಳ ಮಾನಸಿಕ ಸ್ಥಿತಿಗತಿ ಶೀಲತೆಯನ್ನು ಅರಿತು, ನ್ಯಾಯಾಧೀಶರಾದ ಮಹಾವೀರ ಕರಣ್ಣವರ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ ಕೊನೆಗೂ ಅವಳ ಮನ ಒಪ್ಪಿಸಿ ಮಹಿಳಾ ರಕ್ಷಣಾಲಯಕ್ಕೆ ಕಳುಹಿಸುವಲ್ಲಿ ಯಶಸ್ವಿಯಾದರು.

ದೇಶದ ಯಾವ ಮನುಷ್ಯನೂ ಸಹ ಹಸಿವಿನಿಂದ ಸಾಯಬಾರದು. ಮನುಷ್ಯರಿಗೆ ನೋಡುವ ಕಣ್ಣಿದ್ದರಷ್ಟೇ ಸಾಲದು, ಅಂತರಂಗವೂ ಸಹ ಮಿಡಿಯುತ್ತಿರಬೇಕು ಎಂಬುದಕ್ಕೆ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆಯವರೇ ಸಾಕ್ಷಿ ಎಂದು ನಾಗರಿಕರ ಪ್ರಶಂಸೆಗೆ ಪಾತ್ರರಾದರು.

## ರಾಣೇಬೆನ್ನೂರು ತಾ.ನಲ್ಲಿ ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಹಲಗೇರಿ, ಬಿಲ್ಲಹಳ್ಳಿ, ದಂಡಗಿಹಳ್ಳಿ, ಹಾರೋ ಗೊಪ್ಪ, ಆಲದಕಟ್ಟಿ, ಮಣಕೂರು, ಲಿಂಗದಹಳ್ಳಿ, ಅಂತರವಳ್ಳಿ, ನಂದಿಹಳ್ಳಿ, ಯಲಬಡಗಿ, ಗೋಡಿಹಾಳ, ನಿಟ್ಟೂರು, ಕೋಣನತಲೆ, ಗುಡ್ಡದ ಬೇವಿನಹಳ್ಳಿ, ಗುಡ್ಡದ ಹೊಸಳ್ಳಿ, ಹೆಡಿಯಾಲ, ಜೋಯಿಸರಹರಳಹಳ್ಳಿ, ಬೆನಕನಕೊಂಡ, ಉಕ್ಕುಂದ, ಸುಣಕಲ್ಲಬಿದರಿ, ತಿರುಮಲದೇವರಕೊಪ್ಪ, ಕುಸಗೂರು, ಸರವಂದ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಮೇ 4, 5ರಂದು ಗೀತ ಗಾಯನ ತರಬೇತಿ

ದಾವಣಗೆರೆ, ಏ.6- ನಗರದ ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆ ಮತ್ತು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಮೇ 4 ಮತ್ತು 5ರಂದು ಆರ್.ಎಚ್.ಗೀತಾ ಮಂದಿರದಲ್ಲಿ ಸಂಗೀತಾಸಕ್ತ ಹಿರಿಯರಿಗೆ, ಕಿರಿಯರಿಗೆ ವಸಂತ ಋತುವಿನ ಬೇಸಿಗೆ ರಜೆಯ ಪ್ರಯುಕ್ತ ಗೀತ ಗಾಯನ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆ ಸಂಸ್ಥಾಪಕರೂ, ವಿದುಷಿ ಶೋಭಾ ರಂಗನಾಥ್ ತಿಳಿಸಿದ್ದಾರೆ.

ನಾಡಿನ ಸಂಗೀತಗಾರ ಬೆಂಗಳೂರಿನ ಉಪಾಸನ ಮೋಹನ್ ಸಂಗೀತ ತರಬೇತಿ ನಡೆಸಿಕೊಡಲಿದ್ದು, ಆಸಕ್ತರು ಇದೇ ದಿನಾಂಕ 25 ರೊಳಗೆ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 9538732777, 8904672275, 9740104082.

## ನಗರ ಸಾರಿಗೆಯಲ್ಲಿ ಡಾ. ಪ್ರಭಾ ಪ್ರಯಾಣ; ಪ್ರಯಾಣಿಕರ ಜೊತೆ ಚರ್ಚೆ



ದಾವಣಗೆರೆ,ಏ.6- ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ನಗರ ಸಾರಿಗೆ ಬಸ್ಸನ್ನು ಹತ್ತಿ ಉಚಿತವಾಗಿ ಪ್ರಯಾಣಿಸುವ ಮೂಲಕ ಮತದಾರರನ್ನು ಆಕರ್ಷಿಸಿದರು.

ಆಜಾದ್ ನಗರದ ಅರಳಿ ಮರ ಸರ್ಕಲ್‌ನಿಂದ ಮಹಾನಗರ ಪಾಲಿಕೆ, ಅಲ್ಲಿಂದ ಎಸ್.ಎಸ್. ಹೈ ಟೆಕ್ ಆಸ್ಪತ್ರೆ, ಶಾಮನೂರಿನಿಂದ ವಾಟರ್ ಟ್ಯಾಂಕ್‌ವರೆಗೂ ಬಸ್‌ನಲ್ಲಿ ಪ್ರಯಾಣಿಸಿದ ಡಾ. ಪ್ರಭಾ ಅವರು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಮಹಿಳೆಯರ ಉಚಿತ ಬಸ್ ಪ್ರಯಾಣದ 'ಶಕ್ತಿ ಯೋಜನೆ' ಕುರಿತಂತೆ ಬಸ್‌ನಲ್ಲಿದ್ದ ಮಹಿಳೆಯರ ಜೊತೆ ಚರ್ಚೆ ನಡೆಸಿದರು.

ಅಲ್ಲದೆ ಈ ಯೋಜನೆ ಜಾರಿಗೆ ತಂದಿರುವ ಕಾಂಗ್ರೆಸ್ ಪಕ್ಷದಿಂದ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ತಮಗೆ ಮತ ನೀಡುವಂತೆ ಕಳಕಳಿಯ ಮನವಿ ಮಾಡಿದರು.

## ಕಾರ್ಮಿಕನ ಬಡಿದು ಹತ್ಯೆ

(1ನೇ ಪುಟದಿಂದ) ಬಡಿದಿದೆ. ಮಾಜಿ ಗೆಳತಿಯ ಭೇಟಿಯ ವೇಳೆ ಅಶೋಕ್ ದಾಸ್ ಗದ್ದಲ ನಡೆಸಿದ್ದ. ಹೊರ ಬರುವಾಗ ಕೈಗೆ ಗಾಯವಾಗಿತ್ತು ಎಂದು ಹೇಳಲಾಗುತ್ತಿದೆ. ಅಶೋಕ್ ದಾಸ್ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಕೊಲೆಂಚೆರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ಈ ಸಂಬಂಧ ಪೊಲೀಸರು ವಿಜೇಶ್, ಅನೀಶ್, ಸತ್ಯನ್, ಸೂರಜ್, ಕೇಶವ್, ಎಲಿಯಾಸ್ ಕೆ. ಪೌಲ್, ಅಮಲ್, ಅತುಲ್ ಕೃಷ್ಣ, ಎಮಿಲ್ ಹಾಗೂ ಸನಲ್ ಎಂಬುವವರನ್ನು ಬಂಧಿಸಿದ್ದಾರೆ.

## ಮನೋಜ್ ಪೂಜಾರ್ ನಿಧನ



ದಾವಣಗೆರೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಅರ್ಚಕರ ಮಗನಾದ ಶ್ರೀ ಮಹಾದೇವಪ್ಪ, ಶ್ರೀಮತಿ ಸುನೀತಮ್ಮನವರ ಮಗನಾದ ಮನೋಜ್ ಪೂಜಾರ್ (27) ಅವರು ದಿನಾಂಕ 06-04-2024ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಿಧನರಾದರು. ತಾಯಿ, ತಂದೆ, ಸಹೋದರಿ, ಸಹೋದರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07-04-2024ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ಕಾಂಗ್ರೆಸ್ ಪ್ರಣಾಳಿಕೆಯನ್ನು ಮುಸ್ಲಿಂ ಲೀಗ್‌ಗೆ ಹೋಲಿಸಿದ ಮೋದಿ

ಸಹರಾನ್‌ಪುರ (ಉತ್ತರ ಪ್ರದೇಶ), ಏ. 6 - ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಸ್ವಾತಂತ್ರ್ಯ ಹೋರಾಟದ ವೇಳೆಯ ಮುಸ್ಲಿಂ ಲೀಗ್ ಹೋಲುವಂತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿದ್ದ ಕಾಂಗ್ರೆಸ್, ದಶಕಗಳ ಹಿಂದೆಯೇ ಅಂತ್ಯವಾಗಿದೆ ಎಂದೂ ಪ್ರಧಾನಿ ಮೋದಿ ಹೇಳಿದ್ದಾರೆ. ಕಾಂಗ್ರೆಸ್ ಜೊತೆ ಮಹಾತ್ಮಗಾಂಧಿ ಅವರಿದ್ದರು. ಈಗ ಕಾಂಗ್ರೆಸ್ ಬಳಿ ದೇಶ ಹಿತದ ನೀತಿಗಳೂ ಇಲ್ಲ, ದೇಶದ ಅಭಿವೃದ್ಧಿಯ ದೃಷ್ಟಿಕೋನವೂ ಇಲ್ಲ ಎಂದು ಮೋದಿ ಹೇಳಿದ್ದಾರೆ.

ನಿನ್ನೆ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಈ ಪ್ರಣಾಳಿಕೆಯು ಭಾರತದ ಇಂದಿನ ಆಶಯ ಹಾಗೂ ಆಕಾಂಕ್ಷೆಗಳಿಂದ ಸಂಪೂರ್ಣ ದೂರವಾಗಿರುವುದು ಕಂಡು ಬರುತ್ತಿದೆ ಎಂದು ಮೋದಿ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ತನ್ನ ಅಭ್ಯರ್ಥಿಗಳನ್ನು ಪದೇ ಪದೇ ಬದಲಿಸುತ್ತಿರುವುದಕ್ಕೂ ಮೋದಿ ಲೇವಡಿ ಮಾಡಿದ್ದಾರೆ. ಸಮಾಜವಾದಿ ಪಕ್ಷದ ಪರಿಸ್ಥಿತಿ ಉತ್ತರ ಪ್ರದೇಶದಲ್ಲಿ ಯಾವ ರೀತಿ ಆಗಿದೆ ಎಂದರೆ, ಅದು ಗಂಟೆಗೊಮ್ಮೆ ಅಭ್ಯರ್ಥಿ ಬದಲಿಸುತ್ತಿದೆ. ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಇನ್ನೂ ವಿಚಿತ್ರವಾಗಿದೆ. ಆ ಪಕ್ಷಕ್ಕೆ ಅಭ್ಯರ್ಥಿಗಳೇ ಸಿಗುತ್ತಿಲ್ಲ ಎಂದರು.

ಕಾಂಗ್ರೆಸ್ ಪರಿಸ್ಥಿತಿ ಪ್ರಬಲವಾಗಿದೆ ಎಂದು ಹೇಳಲಾಗುವ ಕ್ಷೇತ್ರಗಳಲ್ಲೂ ಸಹ, ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಧೈರ್ಯವಾಗುತ್ತಿಲ್ಲ ಎಂದು ಮೋದಿ ಹೇಳಿದರು. ಅಮೇಥಿ ಹಾಗೂ ರಾಯ್‌ಬರೇಲಿ ಕ್ಷೇತ್ರಗಳನ್ನು ಮೋದಿ ಪರೋಕ್ಷವಾಗಿ ಪ್ರಸ್ತಾಪಿಸಿದ್ದರು.

ಪ್ರತಿಪಕ್ಷಗಳ ಐ.ಎನ್.ಡಿ.ಐ.ಎ. ಮೈತ್ರಿಕೂಟವು ಅಸ್ಥಿರತೆ ಹಾಗೂ ಅನಿಶ್ಚಿತತೆಗೆ ಮತ್ತೊಂದು ಹೆಸರಾಗಿದೆ. ಅವರು ಹೇಳುವ ಒಂದು ಮಾತನ್ನೂ ದೇಶ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದರು.

### ಮುಖರ್ಜಿ ಮುಸ್ಲಿಂ ಲೀಗ್ ಜೊತೆ ಕೈ ಜೋಡಿಸಿದ್ದರು

**ಕಾಂಗ್ರೆಸ್**

ನವದೆಹಲಿ, ಏ. 6 - ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ಮುಸ್ಲಿಂ ಲೀಗ್‌ಗೆ ಹೋಲಿಕೆ ಮಾಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, 1940ರ ಆರಂಭದಲ್ಲಿ ಮುಸ್ಲಿಂ ಲೀಗ್ ಜೊತೆ ಜನಸಂಘದ ಸಂಸ್ಥಾಪಕ ಶ್ಯಾಮ ಪ್ರಸಾದ್ ಮುಖರ್ಜಿ ಕೈ ಜೋಡಿಸಿದ್ದರು ಎಂದು ಹೇಳಿದೆ.

ಪ್ರಧಾನಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಪ್ರಧಾನ ಮಂತ್ರಿಗೆ ಅವರ ಇತಿಹಾಸ ಗೊತ್ತಿಲ್ಲ. ಹಿಂದೂ ಮಹಾಸಭಾ ಅಧ್ಯಕ್ಷರಾಗಿದ್ದ ಮುಖರ್ಜಿ ಅವರು ಆಗ ಬಂಗಾಳದಲ್ಲಿ ಮುಸ್ಲಿಂ ಲೀಗ್ ಜೊತೆಗಿನ ಮೈತ್ರಿ ಸರ್ಕಾರದಲ್ಲಿ ಭಾಗಿಯಾಗಿದ್ದರು ಎಂದಿದ್ದಾರೆ.

ಸಿಂಧ್ ಹಾಗೂ ವಾಯುವ್ಯ ಗಡಿ ಪ್ರಾಂತ್ಯದಲ್ಲೂ ಮುಸ್ಲಿಮ್ ಲೀಗ್ ಜೊತೆ ಹಿಂದೂ ಮಹಾಸಭಾ ಕೈ ಜೋಡಿಸಿತ್ತು ಎಂದು ರಮೇಶ್ ಹೇಳಿದ್ದಾರೆ.

## ಸಂಕ್ಷಿಪ್ತ ಸುದ್ದಿ

**☞ ಈಶ್ವರಪ್ಪ ವಿರುದ್ಧ ಕ್ರಮಕ್ಕೆ ಅಶೋಕ್ ಇಂಗಿತ**

ಬೆಂಗಳೂರು : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಭಾವಚಿತ್ರವನ್ನು ಮತ ಕೇಳುವಂತಹ ರಾಜಕೀಯ ಚಟುವಟಿಕೆಗೆ ಬಳಸುವ ಹಕ್ಕು ಬಿಜೆಪಿಗೆ ಮಾತ್ರ ಇದೆ. ಬಂಡಾಯ ನಾಯಕ ಕೆ.ಎಸ್. ಈಶ್ವರಪ್ಪ ಅವರು ಮೋದಿ ಚಿತ್ರ ಬಳಸುತ್ತಿರುವ ಬಗ್ಗೆ ಪಕ್ಷದ ಕಾನೂನು ವಿಭಾಗ ಪರಿಶೀಲಿಸಲಿದೆ. ನಾವು ಅಗತ್ಯ ದೂರು ದಾಖಲಿಸಲಿದ್ದೇವೆ. ಪಕ್ಷದ ಅಧಿಕೃತ ಅಭ್ಯರ್ಥಿ ವಿರುದ್ಧ ಅವರು ನಾಮಪತ್ರ ಸಲ್ಲಿಸಿದರೆ, ಕ್ರಮ ತೆಗೆದುಕೊಳ್ಳಲಾಗುವುದು ಎಂದು ಬಿಜೆಪಿ ನಾಯಕ ಆರ್. ಅಶೋಕ್ ಹೇಳಿದ್ದಾರೆ.

**☞ ಎನ್.ಐ.ಎ. ಅಧಿಕಾರಿಗಳ ಮೇಲೆ ಹಲ್ಲೆ ಗಂಭೀರ ವಿಷಯ : ರಾಜ್ಯಪಾಲ**

ಕೊಲ್ಕೊತಾ : ಎನ್.ಐ.ಎ. ಅಧಿಕಾರಿಗಳ ಮೇಲೆ ಹಲ್ಲೆ ನಡೆದಿರುವುದು ತುಂಬಾ ಗಂಭೀರ ವಿಷಯ ಎಂದು ಪಶ್ಚಿಮ ಬಂಗಾಳದ ರಾಜ್ಯಪಾಲ ಪಿ.ವಿ. ಆನಂದ ಬೋಸ್ ಹೇಳಿದ್ದು, ಈ ವಿಷಯವನ್ನು ಅಗತ್ಯ ಗಂಭೀರತೆಯೊಂದಿಗೆ ಪರಿಗಣಿಸಲಾಗುವುದು ಎಂದು ಹೇಳಿದ್ದಾರೆ. ಸ್ಫೋಟ ಪ್ರಕರಣವೊಂದರ ಸಂಬಂಧ ಪಶ್ಚಿಮ ಬಂಗಾಳಕ್ಕೆ ತೆರಳಿದ್ದ ಎನ್.ಐ.ಎ. ತಂಡದ ಮೇಲೆ ಹಲ್ಲೆ ನಡೆಸಲಾಗಿತ್ತು.

**☞ ಕಾರ್ಯಾಚರಣೆಯಲ್ಲಿ ಮೂವರು ನಕ್ಸಲರು ಹತ**

ರಾಯಪುರ : ಭದ್ರತಾ ಪಡೆಗಳು ಛತ್ತೀಸ್‌ಘಡದ ಬಿಜಾಪುರ ಜಿಲ್ಲೆಯ ದಟ್ಟ ಅರಣ್ಯದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಮೂವರು ನಕ್ಸಲರನ್ನು ಹೊಡೆದುರುಳಿಸಿದ್ದಾರೆ. ಘಟನಾ ಸ್ಥಳದಿಂದ ಶಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

**☞ ಜಾಲತಾಣಗಳ ಮೂಲಕ ಮಕ್ಕಳ ಮಾರುತ್ತಿದ್ದ ತಂಡ ಬಯಲು**

ನವದೆಹಲಿ : ಸಾಮಾಜಿಕ ಜಾಲತಾಣಗಳ ಮೂಲಕ ಮಕ್ಕಳಿಲ್ಲದವರಿಗೆ ಮಕ್ಕಳನ್ನು ಮಾರುತ್ತಿದ್ದ ತಂಡವನ್ನು ಸಿ.ಬಿ.ಐ. ಬಯಲಿಗೆ ಎಳೆದಿದ್ದು, ಏಳು ಜನರನ್ನು ಬಂಧಿಸಿದೆ. ಇದೇ ವೇಳೆ ಎರಡು ಹಸುಳೆಗಳನ್ನು ರಕ್ಷಿಸಲಾಗಿದೆ. ಬಂಧಿತರು ದೆಹಲಿ ಹಾಗೂ ಹರಿಯಾಣಕ್ಕೆ ಸೇರಿದವರಾಗಿದ್ದಾರೆ. ಇವರು ಮಕ್ಕಳನ್ನು 4ರಿಂದ 6 ಲಕ್ಷ ರೂ.ಗಳಿಗೆ ಮಾರುತ್ತಿದ್ದರು ಎಂದು ಆರೋಪಿಸಲಾಗಿದೆ. ಮಕ್ಕಳ ಮಾರುವ ಹೆಸರಿನಲ್ಲಿ ಇವರು ಹಲವರನ್ನು ವಂಚಿಸಿದ್ದಾರೆ ಎಂದೂ ಸಿ.ಬಿ.ಐ. ತಿಳಿಸಿದೆ.

**☞ ರಾಜ್ಯಸಭೆಗೆ ಲಾಟರಿ ಆಯ್ಕೆ ಪ್ರಶ್ನಿಸಿ ಅರ್ಜಿ ದಾಖಲು**

ಶಿಮ್ಲಾ : ಹಿಮಾಚಲ ಪ್ರದೇಶದಿಂದ ರಾಜ್ಯಸಭೆಗೆ ನಡೆಸಲಾದ ಚುನಾವಣೆಯನ್ನು ಲಾಟರಿ ಮೂಲಕ ನಿರ್ಧರಿಸಿದ ವಿಧಾನವನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕ ಅಭಿಷೇಕ್ ಮನು ಸಿಂಘ್ವಿ ಹಿಮಾಚಲ ಪ್ರದೇಶ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಸಿಂಘ್ವಿ ಹಾಗೂ ಎದುರಾಳಿ ಹರ್ಷ ಮಹಾಜನ್ ಅವರು ತಲಾ 34 ಮತಗಳನ್ನು ಪಡೆದಿದ್ದರು. ನಂತರ ಲಾಟರಿ ಮೂಲಕ ಮಹಾಜನ್ ಗೆದ್ದಿದ್ದಾರೆ ಎಂದು ತಿಳಿಸಲಾಗಿತ್ತು.

**☞ ಕೇಜ್ರಿವಾಲ್ ವಜಾಗೊಳಿಸಲು ಹೈಕೋರ್ಟ್‌ನಲ್ಲಿ ಎಎಪಿ ಮಾಜಿ ಶಾಸಕನ ಅರ್ಜಿ**

ನವದೆಹಲಿ : ಜಾರಿ ನಿರ್ದೇಶನಾಲಯದ ಅಕ್ರಮ ಹಣ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಜೈಲಿನಲ್ಲಿರುವ ಅರವಿಂದ ಕೇಜ್ರಿವಾಲ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆದು ಹಾಕಬೇಕೆಂದು ಆಮ್ ಆದ್ಮಿ ಪಾರ್ಟಿ ಮಾಜಿ ಶಾಸಕ ಸಂದೀಪ್ ಕುಮಾರ್ ಅವರು ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಕೇಜ್ರಿವಾಲ್ ಸಂವಿಧಾನಕ್ಕೆ ಅನುಗುಣವಾಗಿ ಮುಖ್ಯಮಂತ್ರಿ ಹುದ್ದೆ ನಿರ್ವಹಿಸಲು ಅಸಮರ್ಥರಾಗಿದ್ದಾರೆ, ಹೀಗಾಗಿ ಅವರನ್ನು ವಜಾಗೊಳಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

**☞ ಚುನಾವಣಾ ಬಾಂಡ್ ವಿಶ್ವದ ದೊಡ್ಡ ಹಗರಣ : ರಾಹುಲ್ ಗಾಂಧಿ**

ಹೈದರಾಬಾದ್ : ಚುನಾವಣಾ ಬಾಂಡ್ ಯೋಜನೆ ವಿಶ್ವದ ಅತಿ ದೊಡ್ಡ ಹಗರಣ ಎಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನ ಮಂತ್ರಿ ತಮ್ಮ ವ್ಯಕ್ತಿಗಳನ್ನು ಚುನಾವಣಾ ಆಯೋಗದಲ್ಲಿರಿಸಿದ್ದಾರೆ ಎಂದು ಆರೋಪಿಸಿದ್ದಾರೆ.

# ಬೂತ್ ಮಟ್ಟದಲ್ಲಿ ಗಟ್ಟಿಯಾದರೆ ಅಭ್ಯರ್ಥಿ ಗೆದ್ದಂತೆ

## ಬಿಜೆಪಿ ಸ್ಥಾಪನಾ ದಿವಸ್ ಹಾಗೂ ಕಾರ್ಯಕರ್ತರ ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್



ದಾವಣಗೆರೆ, ಏ.6- ಕಾರ್ಯಕರ್ತರೇ ಪಕ್ಷಕ್ಕೆ ಜೀವಾಳ, ಕಾರ್ಯಕರ್ತರ ಶ್ರಮವಿಲ್ಲದಿದ್ದರೆ ಅಭ್ಯರ್ಥಿ ಗೆಲ್ಲು ವುದಿಲ್ಲ. ಹೀಗಾಗಿ ಬಿಜೆಪಿ ಕಾರ್ಯಕರ್ತರು ಬೂತ್‌ಗಳನ್ನು ಗಟ್ಟಿಗೊಳಿಸುವಲ್ಲಿ ಶ್ರಮಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದರು.

ನಗರದ ದಾವಣಗೆರೆ ಹರಿಹರ-ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಬಿಜೆಪಿ ಸ್ಥಾಪನಾ ದಿವಸ್ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗೃಹ ಸಚಿವ ಅಮಿತ್ ಷಾ ಅವರು 'ಮೇರಾ ಬೂತ್ ಸಬ್‌ಸೇ ಮಜಬೂತ್' ಎಂಬ ಮಾತಿನಂತೆ ಕಾರ್ಯ ನಿರ್ವಹಿಸಲು ಹೇಳಿದ್ದಾರೆ. ಅವರ ಮಾತಿನಂತೆ ನಾವು ಬೂತ್ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ನಡೆಸಿ ಬೂತ್ ಬಲಿಷ್ಟ ಗೊಳಿಸಬೇಕು. ಆಗ ಅಭ್ಯರ್ಥಿ ಸೋಲಲು ಸಾಧ್ಯವೇ ಇಲ್ಲ ಎಂದರು.

ಪ್ರತಿ ಬೂತ್‌ನಲ್ಲಿ ಎಲ್ಲಾ ಸಮುದಾಯದ ಮತಗಳೂ ಬೇಕು. ಎಲ್ಲಾ ಸಮುದಾಯದ ಮನೆಗಳಿಗೂ ತೆರಳಿ, ಐದು ನಿಮಿಷಗಳ ಕಾಲ ಕೇಂದ್ರದ ಯೋಜನೆಗಳನ್ನು ಜನತೆಗೆ ತಿಳಿಸಬೇಕು. ದಾವಣಗೆರೆ ದಕ್ಷಿಣದಲ್ಲಿ 25 ಸಾವಿರ ಮತಗಳ ಲೀಡ್ ಕೊಡುವುದಾಗಿ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಹರಿಹರದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ದೇಶವನ್ನು ಬಲಿಷ್ಠಗೊಳಿಸಲು, ಎಲ್ಲಾ ವರ್ಗದ ಜನರಿಗೂ ಸಮಬಾಳು, ಸಮಪಾಲು ಸಿಗಲಿ ಎಂಬ ಉದ್ದೇಶ ದಿಂದ ಬಿಜೆಪಿಗೆ ಬೆಂಬಲ ಕೊಡಲಾಗಿದೆ. ಪರಿಸ್ಥಿತಿಗೆ ಅನುಗುಣವಾಗಿ ಚುನಾವಣೆ ಎದುರಿಸಬೇಕಿದೆ ಎಂದರು.

ಇಂದು ಎಲ್ಲೆಡೆ ಉಗ್ರವಾದ ತಾಂಡವವಾಡುತ್ತಿದೆ. ದೇಶದ ಅನ್ನ ತಿಂದು ಬಾಂಬ್ ಇಡುವವರನ್ನು ಹತ್ತಿಕ್ಕಲು ಮೋದಿ ಹಾಗೂ ಶಾ ಅವರಿಂದ ಮಾತ್ರ ಸಾಧ್ಯ ಎಂದು ಜನರು ತಿಳಿದಿದ್ದಾರೆ ಎಂದು ಶಿವಶಂಕರ್ ಹೇಳಿದರು.

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಸಮಬಲದ ಪೈಪೋಟಿ ಇದೆ. ಅಹಿಂದ ಮತಗಳನ್ನು ಕ್ರೋಢೀಕರಿಸಿಕೊಳ್ಳುವ ಕೆಲಸ ಕಾಂಗ್ರೆಸ್ ಮಾಡುತ್ತಿದೆ. ಬಿಜೆಪಿಗೂ ಅಹಿಂದ ಮತಗಳು ಬೀಳುತ್ತವೆ. ಆದರೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಿದೆ.

ಮತ ಸೆಳೆಯುವ ಪೈಪೋಟಿ ಹೆಚ್ಚಾಗಿದ್ದು, ಅಭ್ಯರ್ಥಿಗಳು ಬೆಳಿಗ್ಗೆ 6 ಗಂಟೆಗಾಗಲೇ ಬೀದಿಗೆ ಬಂದು ಮತ ಯಾಚಿಸುತ್ತಿದ್ದಾರೆ. ಇದೊಂದು ವಿಶೇಷ ಚುನಾವಣೆಯಾಗಿದೆ. ಕಾಂಗ್ರೆಸ್ ಅಧಿಕಾರದ ಬಲದಿಂದ ಜನರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ. ನಾವು ಮೋದಿ ಬಲದಿಂದ ಜನರ ಬಳಿ ಹೋಗೋಣ. ತೀಕ್ಷ್ಣವಾಗಿರುವ ಪೈಪೋಟಿಯಲ್ಲಿ ತುಸು ಎಡವಿದರೂ ಎಡವಟ್ಟಾಗುತ್ತದೆ ಎಂದು ಎಚ್ಚರಿಸಿದರು.

ಹರಿಹರದ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ದೇಶದಾದ್ಯಂತ ಮೋದಿ ಅಲೆ ಎದ್ದಿದೆ. ದೇಶದ ಅಭಿವೃದ್ಧಿಗಾಗಿ ಮತ್ತೆ ಅವರನ್ನು ಪ್ರಧಾನಿ ಮಾಡಿ ಶಕ್ತಿ ತುಂಬುವ ಕೆಲಸ ಮಾಡೋಣ ಎಂದರು.

ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, ದಕ್ಷಿಣ ಕ್ಷೇತ್ರದಲ್ಲಿ 2.10 ಲಕ್ಷ ಮತದಾರರಿದ್ದು, ಎಲ್ಲರ ಮನೆಗೂ ತೆರಳಿ ಮತ ಯಾಚಿಸಿ, ಹೆಚ್ಚು ಮತದಿಂದ ಅಭ್ಯರ್ಥಿ ಗೆಲ್ಲಿಸೋಣ ಎಂದರು.

ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ಇಲ್ಲಿ ಪಕ್ಷವಲ್ಲ, ಮನೆತನದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಒಂದು ಮನೆತನದ ರಾಜಕಾರಣ ಇಲ್ಲಿ ನಡೆಯುತ್ತಿದೆ ಎಂದರು.

ಅಪ್ಪ, ಮಗ ಶಾಸಕರಾಗಿ ಆಯ್ಕೆಯಾಗಿದ್ದು, ಮತ್ತೆ ಅವರ ಮನೆಗೆ ಲೋಕಸಭಾ ಟಿಕೆಟ್ ಕೊಡಲಾಗಿದೆ. ಇದು ಯಾವ ನ್ಯಾಯ ಎಂದು ಪ್ರಶ್ನಿಸಿದರು. ನಮ್ಮಲ್ಲಿರುವ ಸಣ್ಣ ಪುಟ್ಟ ವ್ಯತ್ಯಾಸ ದೂರ ಮಾಡಿ ಎಲ್ಲರೂ ಒಟ್ಟಾಗಿ ಗಾಯತ್ರಿ ಸಿದ್ದೇಶ್ವರ ಅವರನ್ನು ಹೆಚ್ಚು ಮತಗಳಿಂದ ಗೆಲ್ಲಿಸೋಣ ಎಂದರು.

### ನಮ್ಮ ಕಾಮಗಾರಿಗಳನ್ನು ಉದ್ಘಾಟಿಸುವ ಕಾಂಗ್ರೆಸ್‌ನವರು

ರಾಜ್ಯದಲ್ಲಿ ಅಭಿವೃದ್ಧಿ ಪೂರ್ಣ ಕುಂಠಿತವಾಗಿದೆ. ನಮ್ಮ ಸರ್ಕಾರ ಮಾಡಿದ ಕಾಮಗಾರಿಗಳನ್ನು ಕಾಂಗ್ರೆಸ್‌ನವರು ಉದ್ಘಾಟಿಸುತ್ತಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಎಲ್ಲೆಡೆ ಬರಗಾಲ ಬಂದಿದೆ. ಬೋರ್ ಕೊರೆಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯ್ತಿ ಸಿಇಒ ಅವರಿಗೆ ಕರೆ ಮಾಡಿದರೆ ಹೊಸ ಬೋರ್ ಕೊರೆಸಲು ಹಣವಿಲ್ಲ ಎಂದು ಹೇಳುತ್ತಾರೆ. ನೀರಿಲ್ಲದೆ ದನಕರುಗಳನ್ನು ಮಾರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದುವರೆಗೂ ಒಂದು ಗೋಶಾಲೆ ತೆರೆದಿಲ್ಲ. ಸರ್ಕಾರ ಇದೆಯೋ, ಇಲ್ಲವೋ? ಎಂಬ ಅನುಮಾನವಿದೆ ಎಂದು ಹೇಳಿದರು.

ಕಿಸಾನ್ ಸಮ್ಮಾನ್ ಯೋಜನೆಯಡಿ ನೀಡುತ್ತಿದ್ದ ನಾಲ್ಕು ಸಾವಿರ ರೂಪಾಯಿ ಸ್ಥಗಿತಗೊಳಿಸಲಾಗಿದೆ. ಎಸ್ಸಿ-ಎಸ್ಟಿಗೆ ಮೀಸಲಾಗಿದ್ದ 11500 ಕೋಟಿ ರೂ. ಗ್ಯಾರಂಟಿಗೆ ಬಳಸಿಕೊಳ್ಳಲಾಗಿದೆ. ಈಗ ಬಜೆಟ್‌ನಲ್ಲಿ 14 ಸಾವಿರ ಕೋಟಿ ಮೀಸಲಿಟ್ಟಿದ್ದಾರೆ. ಅದರಲ್ಲಿ 14 ರೂಪಾಯಿಯನ್ನು ಬಿಡುಗಡೆ ಮಾಡುವುದಿಲ್ಲ ಎಂದರು.

ಕಾಂಗ್ರೆಸ್‌ನವರಿಗೆ ಈಗಾಗಲೇ ಎರಡು ಅಧಿ ಕಾರವಿದೆ. ಆದರೂ ಮತ್ತೊಂದು ಅಧಿಕಾರ ಕೊಡು ತ್ತಿದ್ದಾರೆ. ನೀವು ಮನಸ್ಸು ಮಾಡಿದರೆ ನಮ್ಮ ಮನೆಗೆ ಒಂದೇ ಅಧಿಕಾರ ಸಿಗುತ್ತದೆ. ನನಗೆ ನಾಲ್ಕು ಬಾರಿ, ನಮ್ಮ ತಂದಿದೆ ಮೂರು ಬಾರಿ ಆಶೀರ್ವದಿಸಿದ್ದೀರಿ. ಇದೀಗ ನನ್ನ ಶ್ರೀಮತಿಗೆ ಆಶೀರ್ವದಿಸಿ ಹೆಚ್ಚು ಮತಗಳಿಂದ ಗೆಲ್ಲಿಸುವಂತೆ ಸಿದ್ದೇಶ್ವರ ಕರೆ ನೀಡಿದರು.

**ಬಿಜೆಪಿ ಅಭ್ಯರ್ಥಿಗೆ ಟಿಕೆಟ್ ನೀಡಿದ್ದನ್ನು ವಿರೋಧಿಸಿ ಬಂಡಾಯ ಎದ್ದಿದ್ದ ಮುಖಂಡರ ನೇತೃತ್ವ ವಹಿಸಿದ್ದ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರು, ಸಮಾರಂಭಕ್ಕೂ ಮುನ್ನವೇ ಸ್ಥಳಕ್ಕೆ ಆಗಮಿಸಿ, ಹಾಗೆಯೇ ತೆರಳಿದರು. ಇನ್ನು ಬಂಡಾಯ ಎದ್ದಿದ್ದವರ ಪೈಕಿ ಬಿ.ಜಿ. ಅಜಯ್ ಕುಮಾರ್ ಹೊರತುಪಡಿಸಿದರೆ, ಬೇರಾವ ಮುಖಂಡರೂ ಆಗಮಿಸಿರಲಿಲ್ಲ.**

**ಪಕ್ಷದಲ್ಲಿ ಭಿನ್ನತೆಗಳು ಸಹಜ. ವ್ಯತ್ಯಾಸಗಳಾದರೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಎಷ್ಟೇ ಎತ್ತರದ ವ್ಯಕ್ತಿಯಾಗಿರಲಿ, ಪಕ್ಷದಿಂದ ದೂರ ಉಳಿದರೆ ಅದು ಪಕ್ಷ ದ್ರೋಹವಾಗುತ್ತದೆ.**

**- ಹೆಚ್.ಎಸ್. ಶಿವಶಂಕರ್, ಮಾಜಿ ಶಾಸಕ**

ದಕ್ಷಿಣ ಮಂಡಲ ಅಧ್ಯಕ್ಷ ಆನಂದರಾವ್ ಸಿಂಧೆ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಮುಖಂಡರುಗಳಾದ ದೇವರಮನೆ ಶಿವಕುಮಾರ್, ಸತೀಶ್ ಕೊಳೇನಹಳ್ಳಿ, ರಾಜನಹಳ್ಳಿ ಶಿವಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಎಸ್.ಟಿ. ವೀರೇಶ್, ರಮೇಶ್ ನಾಯ್ಕ, ಶಿವಪ್ರಕಾಶ್, ಜಯಲಕ್ಷ್ಮಿ, ವೈ. ಮಲ್ಲೇಶ್, ಅನಿಲ್ ಕುಮಾರ್ ನಾಯ್ಕ, ನಾಸೀರ್ ಅಹ್ಮದ್, ಗಾಯತ್ರಿ ಹಾಲೇಶ್, ಜಿ.ಎಂ. ರುದ್ರೇಗೌಡ್ರು, ಸೋಗಿ ಶಾಂತಕುಮಾರ್, ಮುರುಗೇಶ್ ಆರಾಧ್ಯ, ಜೆಡಿಎಸ್ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಅಮಾನುಲ್ಲಾ ಖಾನ್, ಬಾತಿ ಶಿವಶಂಕರ್ ಇತರರು ಉಪಸ್ಥಿತರಿದ್ದರು.

ಶೋಭಾ ಕೊಟ್ರೇಶ್ ಪ್ರಾರ್ಥಿಸಿದರು. ಗುರುಪ್ರಸಾದ್ ಕೈದಾಳೆ ಸ್ವಾಗತಿಸಿದರು. ಪಿ.ಸಿ. ಶ್ರೀನಿವಾಸ್ ಪ್ರಾಸ್ತಾವಿಕವಾಗಿ ಮಾತನಾಡಿದರು.

## 9ಕ್ಕೆ ಹರಿಹರದಲ್ಲಿ ಕಾಳಿಕಾ ದೇವಿ ರಥೋತ್ಸವ

ಹರಿಹರ, ಏ. 6- ನಗರದ ಶ್ರೀ ಕಾಳಿಕಾಂಬ ಹಾಗೂ ಶ್ರೀ ಗುರು ಮೌನೇಶ್ವರ ಸೇವಾ ಸಮಿತಿ, ವಿಶ್ವಕರ್ಮ ಸಮಾಜದ ವತಿಯಿಂದ, ಇದೇ ದಿನಾಂಕ 9 ರಂದು ಬೆಳಿಗ್ಗೆ 117 ನೇ ಶ್ರೀ ಕಾಳಿಕಾ ದೇವಿಯ ರಥೋತ್ಸವ ಜರುಗಲಿದೆ.

ಶ್ರೀ ಕಾಳಿಕಾ ದೇವಸ್ಥಾನದಿಂದ ಆರಂಭಗೊಂಡ ರಥೋತ್ಸವ ರಾಣಿ ಚನ್ನಮ್ಮ ವೃತ್ತದವರೆಗೆ ಬಂದು ಪುನಃ ಕಾಳಿಕಾ ದೇವಿ ದೇವಸ್ಥಾನ ತಲುಪಲಿದೆ.ಏ. 10 ರಂದು ಬೆಳಿಗ್ಗೆ 9 ಕ್ಕೆ ಓಕುಳಿ ಕಾರ್ಯಕ್ರಮ, ನಂತರ ದೇವಿಯನ್ನು ಪಲ್ಲಕ್ಕಿಯಲ್ಲಿರಿಸಿ ತುಂಗಭದ್ರಾ ನದಿಯಲ್ಲಿ ಹೊಳೆ ಪೂಜೆಯೊಂದಿಗೆ ರಾಜ ಬೀದಿಗಳಲ್ಲಿ ಮೆರವಣಿಗೆ ಮಾಡವ ಮೂಲಕ ದೇವಸ್ಥಾನಕ್ಕೆ ಕರೆ ತರಲಾಗುವುದು.

## ಪಾರ್ಕ್‌ನಲ್ಲಿ ಪ್ರಭಾ ಮಲ್ಲಿಕಾರ್ಜುನ್ ಸಂಚಾರ; ಮತಯಾಚನೆ



ದಾವಣಗೆರೆ,ಏ.6- ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ಬೆಳಿಗ್ಗೆ ನಗರದ ಎಂ.ಸಿ.ಕಾಲೋನಿಯಲ್ಲಿರುವ ಕಾಸಲ್ ವಿಠ್ಠಲ್ ಉದ್ಯಾನವನಕ್ಕೆ ತಮ್ಮ ಬೆಂಬಲಿಗರೊಂದಿಗೆ ತೆರಳಿ ಅಲ್ಲಿ ವಾಕ್ ಮಾಡುತ್ತಿದ್ದ ಯುವಕರು, ಮಹಿಳೆಯರು ಮತ್ತು ಹಿರಿಯರನ್ನು ಕಂಡು ಮಾತನಾಡಿಸಿ, ಈ ಬಾರಿ ತಮಗೆ ಮತ ನೀಡುವಂತೆ ಮನವಿ ಮಾಡಿದರು. ತಮ್ಮನ್ನು ಜಯಶೀಲರನ್ನಾಗಿ ಮಾಡಿದರೆ ದಾವಣಗೆರೆ ಅಭಿವೃದ್ಧಿಗೆ ಕಂಕಣಬದ್ಧರಾಗಿ ಶ್ರಮಿಸುವುದಾಗಿ ಡಾ. ಪ್ರಭಾ ಅವರು ವಿನಯದಿಂದ ಭರವಸೆ ನೀಡಿದರು.

## ಚುನಾವಣಾ ಅಕ್ರಮ ತಡೆಗೆ ಗಡಿ ಭದ್ರತಾ ಪಡೆ

ಬೆಂಗಳೂರು, ಏ. 6 - ಚುನಾವಣಾ ಅಕ್ರಮ ಮತ್ತು ಅವ್ಯವಹಾರಗಳನ್ನು ತಡೆಗಟ್ಟಲು ಕೇಂದ್ರ ಚುನಾವಣಾ ಆಯೋಗ ಗಡಿ ಭದ್ರತಾ ಪಡೆ ಹಾಗೂ ಕೆಲವು ಅಧಿಕಾರಿಗಳ ತಂಡವನ್ನು ಕರ್ನಾಟಕಕ್ಕೆ ಕಳಹಿಸಿದೆ.

ಕೆಲವು ಕಾಂಗ್ರೆಸ್ ಅಭ್ಯರ್ಥಿಗಳು ಮತ ಪಡೆಯಲು ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ, ಅದರಲ್ಲೂ ಕೆಲವು ಜಿಲ್ಲೆಗಳಲ್ಲಿ ಇಡೀ ಆಡಳಿತವೇ ಆ ಪಕ್ಷದ ಅಭ್ಯರ್ಥಿಗಳ ಬೆನ್ನಿಗೆ ನಿಂತಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು. ಅದರ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ.

ಬೆಂಗಳೂರು ಗ್ರಾಮಾಂತರ, ಹಾಸನ, ಮಂಡ್ಯ, ಮೈಸೂರು-ಕೊಡಗು ಸೇರಿದಂತೆ, ಕೆಲವು ಕ್ಷೇತ್ರಗಳಲ್ಲಿ ಅಧಿಕಾರಸ್ಥರು ಆಡಳಿತ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಮತದಾರರನ್ನು ಓಲೈಸಿಕೊಳ್ಳಲು ಹಣ ಸೇರಿದಂತೆ ಉಡುಗೊರೆಗಳನ್ನು ಯಥೇಚ್ಛವಾಗಿ ನೀಡುತ್ತಿದ್ದಾರೆ. ಈ ಬಗ್ಗೆ ಸ್ಥಳೀಯ ಜಿಲ್ಲಾ ಆಡಳಿತಕ್ಕೆ ಮತ್ತು ಜಿಲ್ಲಾಧಿಕಾರಿಗಳಿಗೆ ನಾವು ನೀಡಿದ ದೂರಿಗೆ ಕಿಂಚಿತ್ತೂ ಬೆಲೆಯಿಲ್ಲ ಎಂದು ದೂರಲಾಗಿತ್ತು. ತಕ್ಷಣವೇ ಮಧ್ಯೆ ಪ್ರವೇಶ ಮಾಡಿ ಆಮಿಷಗಳನ್ನು ಒಡ್ಡುವುದನ್ನು ನಿಯಂತ್ರಿಸಿ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಅವಕಾಶ ಮಾಡಿಕೊಂಡಬೇಕೆಂದು ದೂರು ನೀಡಿದ್ದರು.

ತದನಂತರ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ ಆಡಳಿತವನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಹೇಳಿದ್ದರು.

ಇದಾದ ನಂತರ ಕೇಂದ್ರ ಗಡಿ ಭದ್ರತಾ ಪಡೆಯ 16 ತುಕಡಿಗಳು ರಾಜ್ಯಕ್ಕೆ ಬಂದಿಳಿದಿವೆ, ಅವುಗಳನ್ನು ಇನ್ನೂ ಯಾವುದೇ ಕ್ಷೇತ್ರಕ್ಕೆ ನಿಯೋಜನೆ ಮಾಡಿಲ್ಲ.

ದೂರುಗಳ ಹಿನ್ನೆಲೆಯಲ್ಲಿ ಸೂಕ್ಷ್ಮ ಹಾಗೂ ಪ್ರಭಾವೀ ಕ್ಷೇತ್ರಗಳಿಗೆ ಕೇಂದ್ರ ಪಡೆಗಳನ್ನು ನಿಯೋಜಿಸುವ ಸಾಧ್ಯತೆ ಇದೆ.

## ಇಂದು ದಕ್ಷಿಣ ಚೀನಾ ಸಮುದ್ರದಲ್ಲಿ ಅಮೆರಿಕ, ಜಪಾನ್, ಆಸ್ಟ್ರೇಲಿಯಾ, ಫಿಲಿಪೈನ್ಸ್‌ಗಳ ನೌಕಾ ದಳ ಕಸರತ್ತು

ಮನೀಲಾ, ಏ. 6 - ದಕ್ಷಿಣ ಚೀನಾ ಸಮುದ್ರದಲ್ಲಿ ಅಮೆರಿಕ, ಜಪಾನ್, ಆಸ್ಟ್ರೇಲಿಯಾ ಹಾಗೂ ಫಿಲಿಪೈನ್ಸ್‌ಗಳು ಭಾನುವಾರ ಮೊದಲ ಜಂಟಿ ನೌಕಾ ದಳ ಕಸರತ್ತು ನಡೆಸಲಿವೆ. ಈ ವೇಳೆ ಸಬ್‌ಮರೀನ್ ವಿರೋಧಿ ಸಮರ ತರಬೇತಿಯನ್ನೂ ಕೈಗೊಳ್ಳಲಾಗುವುದು. ಚೀನಾ ಈ ವಲಯದಲ್ಲಿ ದಾಳಿಕೋರ ವರ್ತನೆ ತೋರುತ್ತಿರುವ ಹಿನ್ನೆಲೆಯಲ್ಲಿ ಕಸರತ್ತು ಪ್ರಾಮುಖ್ಯತೆ ಪಡೆದುಕೊಂಡಿದೆ. ಇಂಡೋ - ಪೆಸಿಫಿಕ್ ವಲಯದಲ್ಲಿ ಶಾಂತಿ ಹಾಗೂ ಸ್ಥಿರತೆ ಕಾಯ್ದುಕೊಳ್ಳುವ ಉದ್ದೇಶದಿಂದ ಈ ನಾಲ್ಕು ಮೈತ್ರಿ ದೇಶಗಳು ಜಂಟಿಯಾಗಿ ಕಸರತ್ತು ನಡೆಸುತ್ತಿವೆ. ಚೀನಾ ಈ ವಲಯದ ಸಮುದ್ರದ ಬಹುಪಾಲು ಹಕ್ಕು ತನ್ನದೆಂದು ಹೇಳುತ್ತಿದೆ. ಈ ಕುರಿತ ಅಂತರರಾಷ್ಟ್ರೀಯ ಮಧ್ಯಸ್ಥಿಕೆಯಲ್ಲಿ ಭಾಗವಹಿಸಲು ನಿರಾಕರಿಸುತ್ತಿದೆ.

## ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಬೆಂಬಲಿಸಿ ಇಂದು ಸಹಕಾರಿಗಳ ಸಭೆ

ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸಲು ಪೂರ್ವಭಾವಿಯಾಗಿ ಇಂದು ಬೆಳಿಗ್ಗೆ 11.30 ಕ್ಕೆ ದಾವಣಗೆರೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸಹಕಾರಿಗಳ ಸಭೆ ಕರೆಯಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೇತೃತ್ವ ವಹಿಸಲಿದ್ದು, ಕಾಂಗ್ರೆಸ್ ಬೆಂಬಲಿತ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಸಹಕಾರ ಒಕ್ಕೂಟ, ಜನತಾ ಬಜಾರ್, ಪಟ್ಟಣ ಸಹಕಾರ ಬ್ಯಾಂಕುಗಳು, ಪಿಎಲ್‌ಡಿ ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಪ್ರಾಥಮಿಕ ಬಳಕೆದಾರರ ಸಂಘಗಳು, ನೇಕಾರಿಕೆ, ಕೈಗಾರಿಕೆ, ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘಗಳು, ನೀರು ಬಳಕೆದಾರರ ಸಹಕಾರ ಸಂಘಗಳು, ಮಹಿಳಾ ಸಹಕಾರ ಸಂಘಗಳು, ಇತರೆ ಎಲ್ಲಾ ವಿಧವಾದ ಸಹಕಾರ ಸಂಘಗಳ ಸಹಕಾರಿಗಳು ಪಾಲ್ಗೊಳ್ಳುವಂತೆ ಕೋರಲಾಗಿದೆ.

## ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಮತ ಚಲಾಯಿಸಿ



ದಾವಣಗೆರೆ, ಏ. 6- ಲೋಕಸಭಾ ಚುನಾವಣೆ ಪ್ರಯುಕ್ತ ಜಿಲ್ಲಾಡಳಿತ ಭವನದ ಆವರಣದಲ್ಲಿ ಶನಿವಾರ ಮಾಜಿ ದೇವದಾಸಿಯರಿಂದ ಮಾನವ ಸರಪಳಿ ನಿರ್ಮಿಸಿ ಮತದಾನ ಸಂಕಲ್ಪ ಮಾಡಲಾಯಿತು.

ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಪ್ರತಿಯೊಬ್ಬರು ತಪ್ಪದೇ ಮತ ಚಲಾಯಿಸಬೇಕು ಮತ್ತು 85 ವರ್ಷ ಮೇಲ್ಪಟ್ಟ ವೃದ್ಧರು ಮನೆಯಿಂದಲೇ ಮತ ಹಾಕಲು ಅವಕಾಶವಿದೆ ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅವರು ಹೇಳಿದರು.

ಇದೇ ವೇಳೆ ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿಗಳು ಪ್ರತಿಜ್ಞಾ ವಿಧಿ ಬೋಧಿಸಿದರು.

ಜಿ.ಪಂ. ಸಿಇಓ ಹಾಗೂ ಸ್ವೀಪ್ ಸಮಿತಿಯ ಅಧ್ಯಕ್ಷ ಸುರೇಶ್ ಬಿ.ಇಟ್ನಾಳ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಜಿ.ಪಂ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ, ಜಿ.ಪಂ. ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಶಾರದ ದೊಡ್ಡಗೌಡ್ರು ಹಾಗೂ ಇತರರಿದ್ದರು.





Contact :
8951099660
9845580245
9900681982
Get P.U. College Updates
Join our WhatsApp Group
http:/bit.ly/atpuc2024
Find us on
Google Maps
http:/bit.ly/atpucloc

Units of Anandathirtha Trust
Governed by Pejawar Adhokshaja Mutt, Udupi



ಆನಂದತೀರ್ಥ ಪಿ.ಯು. ಕಾಲೇಜ್
Anandathirtha P.U. College
Pajaka, Kunjarugiri, Udupi

| SCIENCE | COMMERCE |
|---|---|
| PCMB / PCMC | BASE / BASCs |

☛ No Donation/No Development Fee
☛ Free mid-day meals
☛ Residential Facilities : Boys/Girls Separate Hostel / Gurukula
☛ Free Residential Facilities for Girls from Disadvantaged Backgrounds
☛ Coaching for CET/NEET/CA/CS/ Other Competitive Exams

ಶ್ರೀ ವಿಶ್ವೇಶತೀರ್ಥ ಮಹಾವಿದ್ಯಾಲಯ
Sri Vishweshathirtha Mahavidyalaya
Pajaka, Kunjarugiri, Udupi

| B.C.A. | B.Com |
|---|---|

☛ ದೇಣಿಗೆ ಇಲ್ಲ/ ಅಭಿವೃದ್ಧಿ ಶುಲ್ಕ ಇಲ್ಲ
☛ ಉಚಿತ ಮಧ್ಯಾಹ್ನದ ಬಿಸಿ ಊಟ
☛ ವಸತಿ ಸೌಲಭ್ಯಗಳು : ಹುಡುಗರು / ಹುಡುಗಿಯರ ಪ್ರತ್ಯೇಕ ಹಾಸ್ಟೆಲ್ / ಗುರುಕುಲ
☛ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಹೆಣ್ಣು ಮಕ್ಕಳಿಗೆ ಉಚಿತ ಹಾಸ್ಟೆಲ್ ಸೌಲಭ್ಯ.

## ಗಂಗನರಸಿ ಶ್ರೀ ಗೋಣಿ ಬಸವೇಶ್ವರ ಮಠದಲ್ಲಿ ನಾಳೆ ಯುಗಾದಿ ಪೂಜೆ

ಹರಿಹರ, ಏ. 6 - ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಹೊರ ಮಠದಲ್ಲಿ ಯುಗಾದಿ ಅಮಾವಾಸ್ಯೆಯ ವಿಶೇಷ ಪೂಜಾ ಕಾರ್ಯಕ್ರಮಗಳು ನಾಳೆ ನಡೆಯಲಿವೆ.

ಬೆಳಿಗ್ಗೆ 11 ಗಂಟೆಗೆ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಮಾವಾಸ್ಯೆಯ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆ ಜರುಗುವುದು.

ಕಕ್ಕರಗೊಳ್ಳದ ಸುಲ್ತಾನಪ್ಪನವರ ಬಸವರಾಜಪ್ಪ ಮತ್ತು ಸಹೋದರರು, ಪ್ರಸಾದದ ವ್ಯವಸ್ಥೆ ಏರ್ಪಡಿಸಿದ್ದಾರೆ. ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತದೇವರ ಜೀರ್ಣೋದ್ಧಾರ ಸಮಿತಿ ಆಶ್ರಯದಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದು ಅಧ್ಯಕ್ಷ ಜಿ.ಎಂ. ನಾಗೇಂದ್ರಪ್ಪ, ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಬಿಜೆಪಿ ಸರ್ವಾಧಿಕಾರಿ ಧೋರಣೆ ಖಂಡಿಸಿ ನಗರದಲ್ಲಿ ಇಂದು ಎಎಪಿಯಿಂದ ಪ್ರತಿಭಟನೆ

ಆಮ್ ಆದ್ಮಿ ಪಕ್ಷದ ಜಿಲ್ಲಾ ಸಮಿತಿ ವತಿಯಿಂದ ಬಿಜೆಪಿ ಸರ್ವಾಧಿಕಾರಿ ಧೋರಣೆ ಖಂಡಿಸಿ ಇಂದು ಬೆಳಿಗ್ಗೆ 10 ಗಂಟೆಗೆ ಉಪವಾಸ ಸತ್ಯಾಗ್ರಹವನ್ನು ಜಿಲ್ಲಾಡಳಿತ ಮುಂಭಾಗ ಹಮ್ಮಿಕೊಳ್ಳಲಾಗಿದೆ.

ಭ್ರಷ್ಟಾಚಾರದ ವಿರುದ್ಧ ದೇಶಾದ್ಯಂತ ಹೋರಾಟ ಮಾಡುತ್ತಿರುವ ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರೀವಾಲ್ ಅವರನ್ನೇ ಭ್ರಷ್ಟಾಚಾರಿ ಎಂದು ಬಿಜೆಪಿ ಬಿಂಬಿಸಲು ಪ್ರಯತ್ನ ಮಾಡುತ್ತಿರುವ ಬಿಜೆಪಿ ವಿರುದ್ಧ ದೇಶಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಕೆ.ಎಸ್. ಶಿವಕುಮಾರಪ್ಪ ತಿಳಿಸಿದ್ದಾರೆ.

# ಮತದಾನದ ಹಕ್ಕನ್ನು ನ್ಯಾಯ ಸಮ್ಮತವಾಗಿ ಬಳಸಿಕೊಳ್ಳಬೇಕು

## ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್

ದಾವಣಗೆರೆ, ಏ.6- ಮತದಾನದಿಂದ ದೂರ ಉಳಿದವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಜತೆಗೆ ಅಂತವರಿಗೆ ಮತದಾನ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ ವೆಂಕಟೇಶ್ ಹೇಳಿದರು.

ನಗರದ ಪೊಲೀಸ್ ಕಾಲೋನಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಚುನಾವಣೆಯಲ್ಲಿ ಗ್ರಾಮೀಣ ಭಾಗದಲ್ಲಿ ಶೇ.75ರಷ್ಟು ಮತದಾನವಾಗಿದ್ದರೆ, ನಗರ ಪ್ರದೇಶದಲ್ಲಿ ಶೇ.65ರ ಪ್ರಮಾಣದಲ್ಲಿ ಮತದಾನವಾಗಿದೆ. ಈ ವ್ಯತ್ಯಾಸವನ್ನು ಬರುವ ಚುನಾವಣೆಯಲ್ಲಿ ಸರಿಪಡಿಸುವ ಮೂಲಕ ಎಲ್ಲರೂ ತಪ್ಪದೇ ಮತದಾನ ಮಾಡಲು ಹೇಳಿದರು.

ಹೆಚ್ಚು ವಿದ್ಯಾವಂತರು ಹಾಗೂ ವಿಚಾರವಂತರೇ ಮತದಾನ ಪ್ರಕ್ರಿಯೆಯಿಂದ ದೂರ ಉಳಿದಿದ್ದಾರೆ. ಆದ್ದರಿಂದ ಪ್ರಜಾಪ್ರಭುತ್ವ ನೀಡಿರುವ ಮತದಾನದ ಹಕ್ಕನ್ನು, ಶಿಸ್ತು ಹಾಗೂ ನ್ಯಾಯ ಸಮ್ಮತವಾಗಿ ಬಳಸಿಕೊಳ್ಳಲು ಇದೊಂದು ಸುವರ್ಣಾವಕಾಶ ಎಂದು ಹೇಳಿದರು.

ಕರ್ತವ್ಯ ನಿರತ ಪೊಲೀಸ್ ಪೇದೆಗಳು ಚುನಾವಣೆ ಪ್ರಮಾಣ ಪತ್ರದ ಸಹಾಯದಿಂದ ಕರ್ತವ್ಯ ವ್ಯಾಪ್ತಿಯ




ಸ್ಥಳದಲ್ಲೇ ಮತ ಚಲಾಯಿಸಲು ವ್ಯವಸ್ಥೆ ಕಲ್ಪಿಸಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಸಖಿ ಮತಗಟ್ಟೆ ತೆರೆಯುತ್ತಿದ್ದು, ಅದರ ಸಂಪೂರ್ಣ ನಿರ್ವಹಣೆಯನ್ನು ಮಹಿಳೆಯರೇ ಮಾಡುವರು. 7 ಬೂತ್‌ಗಳಲ್ಲಿ ವಿಕಲಚೇತನರು ನಿರ್ವಹಣೆ ಮಾಡಲಿದ್ದಾರೆ ಎಂದು ಹೇಳಿದರು.

ಜಿ.ಪಂ. ಸಿಇಓ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ. ಇಟ್ನಾಳ್ ಮಾತನಾಡಿ, ಈ ಬರಗಾಲದಲ್ಲಿ ಮತದಾನದ ಜತೆಗೆ ನೀರಿನ ಮಿತ ಬಳಕೆಯೂ ಬಹಳ ಮಹತ್ವದಾಗಿದೆ ಎಂದು ಹೇಳಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಪೊಲೀಸ್ ಠಾಣೆ ಸಂಖ್ಯೆ 94 ಮತ್ತು 95ರ ವ್ಯಾಪ್ತಿಯಲ್ಲಿ ಬರುವ ಸಿಬ್ಬಂದಿಗಳು ವರ್ಗಾವಣೆ ಮತ್ತು ಹಲವು ಕಾರಣಗಳಿಂದ ಮತದಾನ ಕಡಿಮೆ ಆಗಿದ್ದರಿಂದ ಇಲ್ಲಿ ಮತದಾನ ಜಾಗೃತಿ ಹಮ್ಮಿಕೊಂಡಿದ್ದೇವೆ ಎಂದರು.

ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಪೊಲೀಸ್ ಸಿಬ್ಬಂದಿಯ ಕುಟುಂಬಗಳಿಂದ ಮತದಾನ ಪ್ರಮಾಣ ಕುಸಿದಿದೆ ಎಂಬ ಮಾಹಿತಿ ಬಂದಿದೆ. ಈ ನಿಟ್ಟಿನಲ್ಲಿ ಎಲ್ಲ ಸರ್ಕಾರಿ ನೌಕರರು ತಮ್ಮ ಕುಟುಂಬದಿಂದ ಮತದಾನ ಮಾಡಿಸುವ ಜವಾಬ್ದಾರಿ ಹೊರಬೇಕು ಎಂದು ಹೇಳಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ. ಸಂತೋಷ್, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರಿನ್ ಭಾನು ಎಸ್. ಬಳ್ಳಾರಿ, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಬಿಸಿಎಂ ಅಧಿಕಾರಿ ಗಾಯತ್ರಿ ಇತರರು ಇದ್ದರು.

**2023ರ ಚುನಾವಣೆಯಲ್ಲಿ ನಗರದ ಉತ್ತರ ಮತ್ತು ದಕ್ಷಿಣ ವಲಯದಿಂದ ಶೇ.5ರಷ್ಟು ಮತದಾನ ಹೆಚ್ಚಿದ್ದರಿಂದ ರಾಜ್ಯದಲ್ಲೇ ಸ್ವೀಪ್ ಚಟುವಟಿಕೆಯಲ್ಲಿ ಜಿಲ್ಲೆ ಪ್ರಥಮ ಸ್ಥಾನ ಗಳಿಸಿದೆ. ಹಾಗೆಯೇ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಮತದಾನ ಮಾಡುವ ಮೂಲಕ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆಯೋಣ.**

**- ರೇಣುಕಾ, ಆಯುಕ್ತರು, ನಗರ ಪಾಲಿಕೆ**

# ಮಹಾನ್ ನಾಯಕರ ಸಾಧನೆ ಪ್ರಚಾರ ವಾಗದಂತೆ ಮೆಗಾ ಪ್ಲಾನ್: ಆರೋಪ



ರಾಣೇಬೆನ್ನೂರು, ಏ. 6- ಹಸಿರು ಕ್ರಾಂತಿಯ ಹರಿಕಾರ, ಸ್ವಾತಂತ್ರ್ಯ ಹೋರಾಟಗಾರ ಬಾಬು ಜಗಜೀವನರಾಂ ಅವರ 117 ನೇ ಜಯಂತಿಯನ್ನು ಹಾಗೂ ಇದೇ ದಿನಾಂಕ 14 ರಂದು ಆಚರಿಸಲಿರುವ ಸಂವಿಧಾನ ಶಿಲ್ಪಿ ಡಾ.ಬಿ. ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಲೋಕಸಭಾ ಚುನಾವಣಾ ನೀತಿ ಸಂಹಿತೆ ನೆಪದಲ್ಲಿ ಕೇವಲ ನಾಲ್ಕು ಗೋಡೆಗಳ ಮಧ್ಯೆ ಆಚರಿಸುವ ಮೇಗಾ ಪ್ಲಾನ್ ಮಾಡಲಾಗಿದೆ ಎಂದು ರೈತ ಹೋರಾಟಗಾರ ರವೀಂದ್ರ ಗೌಡ ಎಫ್. ಪಾಟೀಲ್ ಆರೋಪಿಸಿದರು.

ಕೇಂದ್ರ ಸರ್ಕಾರದ ಷಡ್ಯಂತ್ರದಿಂದಾಗಿ ಬಾಬೂಜಿ ಹಾಗೂ ಅಂಬೇಡ್ಕರ್ ಜಯಂತಿಯನ್ನು ಕಾಟಾಚಾರಕ್ಕಾಗಿ ಆಚರಣೆ ಮಾಡಲಾಗುತ್ತಿದೆ. ಈ ಮಹಾನ್ ನಾಯಕರಿಗೆ ಅಗೌರವದ ಜೊತೆಗೆ ಜನ ಜಾಗೃತಿಯಾಗದಂತೆ ಅವರ ಸಾಧನೆಗಳನ್ನು ಮರೆ ಮಾಚುವಂತೆ ಮೆಗಾ ಪ್ಲಾನ್ ಮಾಡಿ ಸುದೀರ್ಘ ಕಾಲದ ಚುನಾವಣಾ ನೀತಿ ಸಂಹಿತೆಯ ದಿನಾಂಕವನ್ನು ನಿಗದಿಗೊಳಿಸಿ, ಆ ನೀತಿ ಸಂಹಿತೆಯ ಅಡಿಯಲ್ಲಿ ಈ ಜಯಂತಿಗಳು ಬಂದು ಮರೆಮಾಚಿ ಹೋಗುವಂತೆ ಯೋಜನೆ ರೂಪಿಸಿರುವ ಮೋದಿ ಸರ್ಕಾರದ ದಲಿತ ವಿರೋಧಿ ನೀತಿ ಖಂಡನೀಯ ಎಂದರು.

ತಾಲ್ಲೂಕು ಆಡಳಿತದ ವತಿಯಿಂದ ತಹಶೀಲ್ದಾರ್ ಕಚೇರಿಯಲ್ಲಿ ಚುನಾವಣಾ ನೀತಿ ಸಂಹಿತೆಯ ಗುಮ್ಮದೊಂದಿಗೆ ಬಿಕೋ ಎನ್ನುತ್ತಿರುವ ವಾತಾವರಣದೊಂದಿಗೆ ಕಾಟಾಚಾರಕ್ಕೆ ಜರುಗಿದ ಬಾಬೂಜಿ ಜಯಂತಿ ಕಾರ್ಯವೈಖರಿ ಖಂಡಿಸಿ ಮಾತನಾಡಿದ ಅವರು, ಮಹಾನ್ ನಾಯಕರಿಗೆ ಮಾಡಿದ ಅವಮಾನ ಎಂದು ಹೇಳಿದರು.

ಇದೇ ವೇಳೆ ತಾ.ಪಂ. ಮಾಜಿ ಅಧ್ಯಕ್ಷ ನೀಲಕಂಠಪ್ಪ ಕುಸಗೂರು ಮಾತನಾಡಿ, ಏ.14 ರಂದು ನಡೆಯುವ ಅಂಬೇಡ್ಕರ್ ಜಯಂತಿಯನ್ನಾದರೂ ಅಚ್ಚುಕಟ್ಟಾಗಿ ನೆರವೇರಿಸುವಮತೆ ಒತ್ತಾಯಿಸಿದರು.

ನಗರಸಭೆ ಸದಸ್ಯೆ ಬೇಬಕ್ಕ ಮೆಣಶಿನಹಾಳ್, ಚಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಮಲ್ಲೇಶ ಮದ್ಲೇರ ತಮ್ಮ ಅಸಮಾಧನಾ ವ್ಯಕ್ತಪಡಿಸಿದರು.

# 42.40 ಲಕ್ಷ ರೂ. ವಿಮಾ ಪರಿಹಾರ ನೀಡಲು ಆದೇಶ

ದಾವಣಗೆರೆ, ಏ.6- ನಗರದ ಗೋಲ್ಡನ್ ಸ್ಪೂನ್ ರೆಸ್ಟೋರೆಂಟ್ 2021 ರ ಜನವರಿ 7 ರಂದು ಬೆಂಕಿಗೆ ಆಹುತಿಯಾಗಿ ಅನುಭವಿಸಿದ ನಷ್ಟಕ್ಕೆ ವಿಮಾ ಸಂಸ್ಥೆಗಳಾದ ನ್ಯೂ ಇಂಡಿಯಾ ಮತ್ತು ನ್ಯಾಷನಲ್ ಇನ್ಸೂರೆನ್ಸ್ ವಿಮಾ ಸಂಸ್ಥೆಗಳಿಂದ ನಷ್ಟ ಪರಿಹಾರವಾಗಿ ಒಟ್ಟು 42,40,000 ರೂ.ಗಳನ್ನು ವಿಮಾದಾರರಿಗೆ ಕೊಡುವಂತೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

2019ರಲ್ಲಿ ಪ್ರಾರಂಭ ಗೋಲ್ಡನ್ ಸ್ಪೂನ್ ರೆಸ್ಟೋರೆಂಟ್ ಬೆಂಕಿಗೆ ಆಹುತಿಯಾಗಿ ಸಂಪೂಣವಾಗಿ ಸುಟ್ಟು ಹೋಗಿತ್ತು. ಈ ರೆಸ್ಟೋರೆಂಟ್ ತನ್ನ ಒಟ್ಟು ಪರಿಕರಗಳ ಮೇಲೆ ನ್ಯೂ ಇಂಡಿಯಾ ಮತ್ತು ನ್ಯಾಷನಲ್ ಇನ್ಸೂರೆನ್ಸ್ ವಿಮಾ ಸಂಸ್ಥೆಗಳಿಂದ ವಿಮೆಗೆ ಒಳಪಟ್ಟಿತ್ತು.ವಿಮಾ ಸಂಸ್ಥೆಗಳು ರೆಸ್ಟೋರೆಂಟ್ ಮಾಲೀಕರ ಅಹವಾಲಿನ ಹೊರತಾಗಿಯೂ ವಿಮಾ ಹಣ ಪಾವತಿಸಲು ನಿರಾಕರಿಸಿದ್ದರಿಂದ ಹೋಟೆಲ್ ಮಾಲೀಕರಾದ ಸುಮ, ಈ ಮೇಲ್ಕಾಣಿಸಿದ 2 ವಿಮಾ ಸಂಸ್ಥೆಗಳ ವಿರುದ್ಧ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ದೂರನ್ನು ಸಲ್ಲಿಸಿದರು.

ಪ್ರಕರಣದಲ್ಲಿ ಹೋಟೆಲ್‌ಗೆ ಹಣಕಾಸಿನ ನೆರವು ನೀಡಿದ ಕೆನರಾ ಬ್ಯಾಂಕಿನವರನ್ನೂ ಸಹ ಎದುರುದಾರ ಪಕ್ಷಗಾರರನ್ನಾಗಿ ಸೇರಿಸಲಾಗಿತ್ತು. ಈ ಆಯೋಗದ ನೋಟಿಸ್‌ಗೆ ಎದುರುದಾರ ವಿಮಾ ಸಂಸ್ಥೆ ಮತ್ತು ಬ್ಯಾಂಕ್‌ಗಳು ಆಯೋಗದಲ್ಲಿ ತಮ್ಮ ವಕೀಲರ ಮುಖಾಂತರ ಹಾಜರಾಗಿ ತಕರಾರನ್ನು ಸಲ್ಲಿಸಿ 2 ವಿಮಾ ಸಂಸ್ಥೆಗಳು ತಮ್ಮ ಪಾಲಿನ ಒಟ್ಟು ಮೊತ್ತ 16,000 ರೂ. ಗಳು ಮಾತ್ರ ಕೊಡಬಹುದಾಗಿದೆ ಮತ್ತು ಹಣಕಾಸಿನ ನೆರವು ನೀಡಿದ ಕೆನರಾ ಬ್ಯಾಂಕಿಗೆ ಪಾವತಿಸುವುದಾಗಿ ತಕರಾರು ಸಲ್ಲಿಸಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಎದುರುದಾರರ ವಿಮಾ ಸಂಸ್ಥೆಯು, ದೂರುದಾರರು ಕೆನರಾ ಬ್ಯಾಂಕಿನಲ್ಲಿ ಪಡೆದುಕೊಂಡ ಸಾಲಕ್ಕೆ ಭದ್ರತೆಯ ರೂಪದಲ್ಲಿ ವಿಮೆ ನೀಡಿರುವುದರಿಂದ, ಈ ವಿಮಾ ಮೊತ್ತ ರೂ. 17,00,000/-ಗಳನ್ನು ಬ್ಯಾಂಕಿಗೆ ಜಮಾ ಮಾಡಬೇಕೆಂದು ಮತ್ತು ಇನ್ನುಳಿದ ಹೋಟೆಲ್‌ನ ಆಸ್ತಿ-ಪಾಸ್ತಿಯ ಮೇಲೆ ಒಟ್ಟು ರೂ. 48,20,000/- ವಿಮೆ ನೀಡಿದ್ದ, 2ನೇ ಎದುರುದಾರ ನ್ಯಾಷನಲ್ ಇನ್ಸೂರೆನ್ಸ್ ವಿಮಾ ಸಂಸ್ಥೆ ದೂರುದಾರರಾದ ಹೋಟೆಲ್ ಮಾಲೀಕರಿಗೆ ಒಟ್ಟು ರೂ. 35,40,000/-ಗಳನ್ನು ಪ್ರತಿಶತ ಶೇ.18ರ ಬಡ್ಡಿ ದರದಂತೆ ಘಟನೆ ನಡೆದ ದಿನದಿಂದ ಕೊಡುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಮಹಂತೇಶ ಈರಪ್ಪ ಶಿಗ್ಲಿ, ಸದಸ್ಯರಾದ ತ್ಯಾಗರಾಜನ್, ಬಿ.ಯು. ಗೀತಾ ಅವರು ತೀರ್ಪು ನೀಡಿ ಆದೇಶಿಸಿದ್ದಾರೆ.

# ಭಾರತದ ಚುನಾವಣೆಯ ಮೇಲೆ ಪ್ರಭಾವ ಬೀರಲು ಚೀನಾ ಎ.ಐ. ಬಳಕೆ

ನ್ಯೂಯಾರ್ಕ್, ಏ. 6 - ಭಾರತ, ದಕ್ಷಿಣ ಕೊರಿಯಾ ಹಾಗೂ ಅಮೆರಿಕ ದಂತಹ ದೇಶಗಳಲ್ಲಿ ಚುನಾವಣೆ ಮೇಲೆ ಪ್ರಭಾವ ಬೀರಲು ಚೀನಾ ಕೃತಕ ಬುದ್ಧಿವಂತಿಕೆ ಆಧರಿತ ಸಾಮಾ ಜಿಕ ಮಾಧ್ಯಮ ಬಳಸಿಕೊಳ್ಳಬಹುದು ಎಂದು ಮೈಕ್ರೋಸಾಫ್ಟ್ ಎಚ್ಚರಿಕೆ ನೀಡಿದೆ.

ಏಪ್ರಿಲ್ 19 ರಿಂದ ಭಾರತ ದಲ್ಲಿ ಲೋಕಸಭಾ ಚುನಾವಣೆಗಳು ಆರಂಭವಾಗಲಿದ್ದು, ಏಳು ಹಂತ ಗಳಲ್ಲಿ ಚುನಾವಣೆ ನಡೆಯಲಿದೆ.

ದಕ್ಷಿಣ ಕೊರಿಯಾದಲ್ಲಿ ಏಪ್ರಿಲ್ 10ರಿಂದ ಹಾಗೂ ಅಮೆರಿಕದಲ್ಲಿ ನವೆಂಬರ್ 5ರಿಂದ ಚುನಾವಣೆಗಳು ನಡೆಯಲಿವೆ. ಈ ವರ್ಷ ಸಾಕಷ್ಟು ದೇಶಗಳಲ್ಲಿ ಚುನಾವಣೆಗಳು ನಡೆಯಲಿವೆ. ಚೀನಾ ಕೃತಕ ಬುದ್ಧಿವಂತಿಕೆಯ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿನ ಮಾಹಿತಿ ಬಳಸಿಕೊಂಡು ಚುನಾವಣೆ ಮೇಲೆ ಪ್ರಭಾವ ಬೀರಬಹುದು ಎಂದು ಮೈಕ್ರೋಸಾಫ್ಟ್ ಥ್ರೆಟ್ ಅನಲಿಸಿಸ್ ಸೆಂಟರ್‌ನ ವ್ಯವಸ್ಥಾಪಕ ನಿರ್ದೇಶಕ ಕ್ಲಿಂಟ್ ವಾಟ್ಸ್ ಹೇಳಿದ್ದಾರೆ.

ಈ ರೀತಿಯ ಪ್ರಭಾವದ ಮೂಲಕ ಚುನಾವಣಾ ಫಲಿತಾಂಶದ ಮೇಲೆ ಆಗುವ ಪರಿಣಾಮ ಕಡಿಮೆ. ಆದರೂ, ಚೀನಾ ಕೃತಕ ಬುದ್ಧಿವಂತಿಕೆಯ ಮೀಮ್, ವಿಡಿಯೋ ಹಾಗೂ ಆಡಿಯೋಗಳನ್ನು ಬಳಸಲಿದೆ. ಮುಂಬರುವ ದಿನಗಳಲ್ಲಿ ಇದು ಹೆಚ್ಚು ಪರಿಣಾಮಕಾರಿಯಾಗಲಿದೆ ಎಂದು ವಾಟ್ಸ್ ಹೇಳಿದ್ದಾರೆ. ಮತದಾರರಲ್ಲಿ ವಿಭಜನೆ ಸೃಷ್ಟಿಸಲು ಚೀನಾ ನಕಲಿ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಬಳಸುತ್ತಿದೆ. ಇದು ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಮೇಲೆ ಪರಿಣಾಮ ಬೀರಬಹುದಾಗಿದೆ.

ಉತ್ತರ ಕೊರಿಯಾ ಸಹ ಚುನಾವಣೆಗಳ ಮೇಲೆ ಪ್ರಭಾವ ಬೀರುವ ಯತ್ನದಲ್ಲಿದೆ. ಕ್ರಿಪ್ಟೋಕರೆನ್ಸಿ ದುರ್ಬಳಕೆ ಹಾಗೂ ಪೂರೈಕೆ ಜಾಲದ ಮೇಲಿನ ದಾಳಿ ಸೇರಿದಂತೆ ಹಲವು ವಾಮಮಾರ್ಗಗಳನ್ನು ಬಳಸುತ್ತಿದೆ. ಎ.ಐ. ಅನ್ನೂ ಉತ್ತರ ಕೊರಿಯಾ ದಾಳವಾಗಿ ಬಳಸುತ್ತಿದೆ.

# ಶ್ರೇಷ್ಠ ವಿಜ್ಞಾನಿಗಳಂತೆ ಕೊಡುಗೆ ನೀಡಬೇಕು




**ಹಾಲಮ್ಮ ಕಾಲೇಜಿನ ವಿಜ್ಞಾನ ದಿನಾಚರಣೆಯಲ್ಲಿ ದಾವಿವಿ ಪ್ರಾಧ್ಯಾಪಕ ಡಾ.ಜಿ.ಡಿ.ಪ್ರಸನ್ನ**

ದಾವಣಗೆರೆ,ಏ.6- ವಿಶ್ವದ ಶ್ರೇಷ್ಠ ವಿಜ್ಞಾನಿಗಳಂತೆ ಇಂದಿನ ವಿದ್ಯಾರ್ಥಿಗಳೂ ಸಹ ವಿಜ್ಞಾನ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡುವಂತಾಗಬೇಕು ಎಂಬ ಆಶಯವನ್ನು ದಾವಣಗೆರೆ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಡಾ. ಜಿ.ಡಿ. ಪ್ರಸನ್ನ ಅವರು ವ್ಯಕ್ತಪಡಿಸಿದರು.

ನಗರದ ಜಿಎಂಎಚ್ ಪಿಯು ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು 'ಜ್ಞಾನದಿಂದ ವಿಜ್ಞಾನದ ಕಡೆಗೆ' ಎಂಬ ಉಕ್ತಿಯಂತೆ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಿ. ವಿ. ರಾಮನ್‌ರ ಜೀವನ ಚರಿತ್ರೆ ಮತ್ತು ಅವರು ನಡೆದು ಬಂದ ಸಾಧನೆಯ ಹಾದಿಯನ್ನು ತಿಳಿಸುವುದರೊಂದಿಗೆ, ವಿಜ್ಞಾನದ ಕೊಡುಗೆಗಳಿಗೆ ಸಾಕ್ಷಿಯಾದ ವಿಜ್ಞಾನಿಗಳನ್ನು ಸ್ಮರಿಸುತ್ತಾ, ಬಾನ ಚಿತ್ತಾರದಲ್ಲಿ ಕಾಮನಬಿಲ್ಲಿನ ಬೆಳಕಿನ ಪ್ರತಿಫಲನದ ಬಿಂಬ, ಪ್ರತಿಬಿಂಬಗಳ ವಿವರಣೆಗಳನ್ನು ಮಕ್ಕಳಿಗೆ ಮನ ಮುಟ್ಟುವಂತೆ ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಚ್. ಎಸ್. ಓಂಕಾರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಲ್ಲಿರುವ ಜ್ಞಾನದೊಂದಿಗೆ ವಿಜ್ಞಾನ ಮತ್ತಷ್ಟು ಬೆಳೆಯಲಿ, ಮುಂದಿನ ಪೀಳಿಗೆಗೆ ಇವರ ಸಾಧನೆಗಳು ಸ್ಫೂರ್ತಿದಾಯಕವಾಗಲಿ ಎಂದು ಹೇಳಿದರು.

ಕಾಲೇಜಿನ ಸಹ ಆಡಳಿತ ಅಧಿಕಾರಿ ಜಿ. ಜೆ. ಶಿವಕುಮಾರ್ ಉಪಸ್ಥಿತರಿದ್ದರು.

# ಲೋಕಸಭಾ ಚುನಾವಣೆ : ಮತದಾನ ಸಿಬ್ಬಂದಿಗೆ ನಾಳೆ ಮೊದಲ ಸುತ್ತಿನ ತರಬೇತಿ

**ಮಸ್ಟರಿಂಗ್, ಡಿ.ಮಸ್ಟರಿಂಗ್ ಕೇಂದ್ರಗಳ ವಿವರ**

ದಾವಣಗೆರೆ, ಏ.6- ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೂರನೇ ಹಂತ ಅಂದರೆ ರಾಜ್ಯದ ಎರಡನೇ ಹಂತದಲ್ಲಿ ಮೇ 7 ರಂದು ಮತದಾನ ನಡೆಯಲಿದೆ. ಮತದಾನದ ಸಿಬ್ಬಂದಿಗೆ ನಾಡಿದ್ದು ದಿನಾಂಕ 8 ರ ಸೋಮವಾರ ಬೆಳಗ್ಗೆ 10 ಗಂಟೆಗೆ ಆಯಾ ತಾಲ್ಲೂಕಿನ ಮಸ್ಟರಿಂಗ್, ಡಿ.ಮಸ್ಟರಿಂಗ್ ಕೇಂದ್ರ ಹಾಗೂ ತರಬೇತಿಗೆ ನೇಮಕವಾದ ಸ್ಥಳದಲ್ಲಿ ಮೊದಲ ಸುತ್ತಿನ ತರಬೇತಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

**ಮಸ್ಟರಿಂಗ್, ಡಿ.ಮಸ್ಟರಿಂಗ್ ತರಬೇತಿ ನಡೆಯುವ ಕೇಂದ್ರಗಳ ವಿವರ; ಜಗಳೂರು :** ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಿಹರ; ಸೆಂಟ್ ಮೇರಿಸ್ ಕಾನ್ವೆಂಟ್ ಸ್ಕೂಲ್, ಹರಪನಹಳ್ಳಿ ರಸ್ತೆ, ಹರಿಹರ, ದಾವಣಗೆರೆ ಉತ್ತರ; ಡಿಆರ್‌ಆರ್ ವಿದ್ಯಾಸಂಸ್ಥೆ, ಪಿ.ಬಿ.ರಸ್ತೆ, ದಾವಣಗೆರೆ ದಕ್ಷಿಣ; ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆ, ಪಿ. ಜೆ.ಬಡಾವಣೆ, ಹೈಸ್ಕೂಲ್ ಮೈದಾನ, ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿನ ಮತದಾನ ಸಿಬ್ಬಂದಿಗಳಿಗೆ ಸಿದ್ದಗಂಗಾ ವಿದ್ಯಾಸಂಸ್ಥೆ, ಸಿದ್ದರಾಮೇಶ್ವರ ಬಡಾವಣೆ ಇಲ್ಲಿ ತರಬೇತಿ ನಡೆಯಲಿದೆ.

ಮಾಯಕೊಂಡ; ಶ್ರೀ ಮೋತಿ ವೀರಪ್ಪ ಪದವಿ ಪೂರ್ವ ಕಾಲೇಜು, ತರಬೇತಿಯು ತರಳಬಾಳು ವಿದ್ಯಾಸಂಸ್ಥೆ, ಅನುಭವ ಮಂಟಪ, ಹದಡಿ ರಸ್ತೆ, ದಾವಣಗೆರೆ. ಚನ್ನಗಿರಿ; ಶ್ರೀ ಶಿವಲಿಂಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ; ಶ್ರೀಮತಿ ಗಂಗಮ್ಮ ಶ್ರೀ ವೀರಭದ್ರಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರ, ಹಿರೇಕಲ್ಮಠ, ಹೊನ್ನಾಳಿ ಇಲ್ಲಿ ಮಸ್ಟರಿಂಗ್, ಡಿ.ಮಸ್ಟರಿಂಗ್ ಮತ್ತು ತರಬೇತಿ ನಡೆಯಲಿದೆ.

ಮತದಾನದ ಪಿಆರ್‌ಓ, ಎಪಿಆರ್‌ಓಗಳಿಗೆ ನೇಮಕಾತಿ ಆದೇಶ ಕಳುಹಿಸಲಾಗಿದ್ದು, ಆದೇಶ ನೀಡಿದ ಎಲ್ಲಾ ಮತದಾನ ಅಧಿಕಾರಿಗಳು, ಸಿಬ್ಬಂದಿಗಳು ಆಯಾ ಕ್ಷೇತ್ರ ವ್ಯಾಪ್ತಿಯಲ್ಲಿ ನಾಡಿದ್ದು ದಿನಾಂಕ 8 ರಂದು ನಿಯೋಜಿಸಿದ ತರಬೇತಿಗೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

**WALK IN INTERVIEW**

*Applications are invited for the following post*

- English Teacher BA., B.Ed., (English Major)
- Social Teacher BA., B.Ed., (English Major)
- Hindi Teacher Hindi B.Ed.,
- Mathematics Teacher B.Sc., B.Ed.,
- Physical Education (PE) Teacher BPEd.,

*For more details Contact :*

**80738 45050**

**ಶೀಘ್ರವೇ ಹೊಸ ಪಿಯು ಕಾಲೇಜು**

**ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ಸಂಪರ್ಕಿಸಿ**

ದಾವಣಗೆರೆಯ ಎಸ್.ಎಸ್. ಬಡಾವಣೆಯ 'ಬಿ' ಬ್ಲಾಕ್ ನಲ್ಲಿ ಸುಸಜ್ಜಿತ ಕಟ್ಟಡದಲ್ಲಿ ಉತ್ತಮ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಹೊಸ ಶಿಕ್ಷಣ ಸಂಸ್ಥೆಯಿಂದ ಶೀಘ್ರದಲ್ಲೇ ಇದೇ 2024-25 ನೇ ಶೈಕ್ಷಣಿಕ ವರ್ಷದಿಂದ **ವಿಜ್ಞಾನ ಮತ್ತು ವಾಣಿಜ್ಯ ಪಿ.ಯು.ಕಾಲೇಜು** ಪ್ರಾರಂಭವಾಗಲಿದೆ.

ಈ ಕಾಲೇಜಿನ ಸ್ಥಾಪನೆ ಬಗ್ಗೆ, ಸಂಸ್ಥೆಯ ಸುಸಜ್ಜಿತ ಕಟ್ಟಡ, ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದ ಬಗ್ಗೆ, ಕಾಲೇಜಿನ ಪ್ರಥಮ ವರ್ಷದ ಪ್ರವೇಶದ ಮಾಹಿತಿ ಯನ್ನು ಎಸ್.ಎಸ್.ಎಲ್.ಸಿ. ಪಾಸಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮತ್ತು ಅವರ ಪೋಷಕರಿಗೆ ಈ ಮಾಹಿತಿ ನೀಡಲಿಚ್ಚಿಸುವ ವ್ಯಕ್ತಿಗಳು/ಏಜೆನ್ಸಿಗಳು ಕೂಡಲೇ ಈ ಕೆಳಕಂಡ ಮೊಬೈಲ್ ಸಂಖ್ಯೆ ಗಳನ್ನು ಸಂಪರ್ಕಿಸಲು ಕೋರಿದೆ.

**94481 55159, 94485 33631**

**94496 50016, 83102 92679, 92421 34700**

# ಹೊನ್ನಾಳಿ ತಾ.ನಲ್ಲಿ ಕರಡಿ ದಾಳಿ : ರೈತನಿಗೆ ಗಂಭೀರ ಗಾಯ



ಹೊನ್ನಾಳಿ, ಏ. 6- ತಾಲ್ಲೂಕಿನ ತಿಮ್ಲಾ ಪುರ ಗ್ರಾಮ ಪಂ ಚಾಯತಿ ವ್ಯಾಪ್ತಿಯ ಬೇವಿನಹಳ್ಳಿ ಗ್ರಾಮದ ರೈತ ನಯಾಜ್ ಅಹ್ಮ ದ್ ತಮ್ಮ ತೋಟಕ್ಕೆ ನೀರು ಬಿಡಲು ಹೋದಾಗ ಗುಡ್ಡದ ಭಾಗದಿಂದ ಬಂದ ಕರಡಿ ದಾಳಿ ಮಾಡಿ ತಲೆ, ಬೆನ್ನಿಗೆ, ಬಲಗಾಲಿನ ತೊಡೆ ಭಾಗ ಗಾಯಗೊಂಡ ಘಟನೆ ನಡೆದಿದೆ.

ಗಾಯಗೊಂಡ ರೈತ ನಯಾಜ್ ಅಹ್ಮದ್ ಅವರನ್ನು ತಕ್ಷಣ ಅಲ್ಲಿನ ರೈತರು ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಆಗಮಿಸಿ ವರದಿ ಪಡೆದಿದ್ದಾರೆ.

# ಪತ್ರಕರ್ತರಿಗೆ ಸೂಕ್ತ ಭದ್ರತೆ ನೀಡಲು ಆಗ್ರಹ

ಕೊಟ್ಟೂರು, ಏ. 6 - ಸಮಾಜದ ಸ್ವಾಸ್ಥ್ಯ ಕೆಡಿಸುವಂತಹ ಕೃತ್ಯಗಳನ್ನು ಬಯಲಿಗೆಳೆದು, ವರದಿ ಮಾಡಿ ಸಮಾಜವನ್ನು ಎಚ್ಚರಗೊಳಿಸುತ್ತಿರುವ ಪತ್ರಕರ್ತರ ಮೇಲೆ ಸುಳ್ಳು ಆರೋಪ ಹಾಗೂ ಪತ್ರಕರ್ತರಿಗೆ ಜೀವ ಬೆದರಿಕೆ ಹಾಕುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಸಾಮೂಹಿಕ ಸಂಘಟನೆಗಳ ಪದಾಧಿಕಾರಿಗಳು ಪೊಲೀಸ್ ಉಪ ಆರಕ್ಷಕರಿಗೆ ಮನವಿ ಸಲ್ಲಿಸಿದರು.

ಎನ್‌ಎಫ್‌ಐಡಬ್ಲ್ಯೂ ರಾಜ್ಯ ಕಾರ್ಯದರ್ಶಿ ಕೆ. ರೇಣುಕಮ್ಮ, ಡಿಎಸ್‌ಎಸ್ ತಾಲ್ಲೂಕು ಅಧ್ಯಕ್ಷ ಪಿ. ಚಂದ್ರಶೇಖರ್, ಸಿಪಿಎಂಎಲ್ ಲಿಬ್ರೇಷನ್ ಪಕ್ಷದ ತಾಲ್ಲೂಕು ಕಾರ್ಯದರ್ಶಿ ಜಿ. ಮಲ್ಲಿಕಾರ್ಜುನ್, ಮುಸ್ಲಿಂ ಸಂಘದ ಅಧ್ಯಕ್ಷ ನೂರ್, ತಿಮ್ಮಣ್ಣ, ರಾಜುಗೌಡ ಹಾಗೂ ಇತರರು ಪೊಲೀಸರಿಗೆ ಮನವಿ ನೀಡಿದರು.

# ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯ ಸಿಬ್ಬಂದಿ ಮೇಲೆ ದಾಳಿ

ನವದೆಹಲಿ, ಏ. 6 - 2022ರ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೆ ತೆರಳಿದ್ದ ರಾಷ್ಟ್ರೀಯ ತನಿಖಾ ಸಂಸ್ಥೆಯ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಘಟನೆ ಪಶ್ಚಿಮ ಬಂಗಾಳದಲ್ಲಿ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೂರ್ವ ಮೇದಿನಿಪೂರೆ ಜಿಲ್ಲೆಯಲ್ಲಿ ತನಿಖಾ ಸಂಸ್ಥೆಯ ಮೇಲೆ ಹಲ್ಲೆ ನಡೆಸಿದಾಗ ಒಬ್ಬರೆ ಅಧಿಕಾರಿ ಗಾಯ ಗೊಂಡಿದ್ದಾರೆ. ಅವರಿದ್ದ ವಾಹನಕ್ಕೆ ಹಾನಿಯಾಗಿದೆ. ಕಳೆದ ಜನವರಿ 5ರಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಗೆ ತೃಣಮೂಲ ಕಾಂಗ್ರೆಸ್ ನಾಯಕ ಶಹಜಹಾನ್ ಶೇಖ್ ವಿರುದ್ಧ ಕ್ರಮ ತೆಗೆದುಕೊಳ್ಳಲು ತೆರಳಿದಾಗಲೂ ತೀವ್ರ ಹಲ್ಲೆ ನಡೆಸಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಎನ್.ಐ.ಎ. ವಕ್ತಾರರು, ಡಿಸೆಂಬರ್ 2022ರಲ್ಲಿ ನಡೆದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಪ್ರಮುಖ ಸಂಚುಕೋರರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. ಸ್ಫೋಟದಲ್ಲಿ ಮೂವರು ಸಾವನ್ನಪ್ಪಿದ್ದರು.

ಬಲಾಯ್ ಚರಣ್ ಮೇಟಿ ಹಾಗೂ ಮನೋಬ್ರತ ಜಾನ ಎಂಬುವವರನ್ನು ಬಂಧಿಸಲಾಗಿದೆ. ಐದು ತಾಣಗಳ ಮೇಲೆ ದಾಳಿ ನಡೆಸಿದ ನಂತರ ಕ್ರಮ ತೆಗೆದುಕೊಳ್ಳಲಾಗಿದೆ.

ಬಂಧನ ಕ್ರಮಕ್ಕೆ ಮುಂದಾಗಿದ್ದ ಸಿಬ್ಬಂದಿಯನ್ನು ಜನರ ಗುಂಪು ತಡೆದು ಹಲ್ಲೆ ನಡೆಸಿದೆ. ಈ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಜಾನ ಹಾಗೂ ಮೇಟಿ ಕಚ್ಚಾ ಬಾಂಬ್ ಉತ್ಪಾದಿಸುತ್ತಿದ್ದರು ಹಾಗೂ ಭೀತಿ ಹರಡುತ್ತಿದ್ದರು ಎಂದು ಎನ್.ಐ.ಎ. ವಕ್ತಾರರು ಹೇಳಿದ್ದಾರೆ.

ಡಿಸೆಂಬರ್ 3, 2022ರಲ್ಲಿ ಭೂಪತಿ ನಗರದಲ್ಲಿ ರಾಜಕುಮಾರ ಮನ್ನಾ ಎಂಬುವವರ ಮನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೂವರು ಸಾವನ್ನಪ್ಪಿದ್ದರು. ರಾಜಕುಮಾರ್ ಮನ್ನಾ, ಬಿಸ್ವಜಿತ್ ಗಯೆನ್ ಹಾಗೂ ಬುದ್ಧದೇಬ್ ಮನ್ನ ಅವರು ತೀವ್ರವಾಗಿ ಗಾಯಗೊಂಡಿದ್ದರು.

ಪೊಲೀಸರು ಸ್ಫೋಟದಲ್ಲಿ ಹತರಾದ ಮೂವರ ವಿರುದ್ಧ ಎಫ್.ಐ.ಆರ್. ದಾಖಲಿಸಿದ್ದು. ಆದರೆ, ಸ್ಫೋಟ ವಸ್ತುಗಳ ಕಾಯ್ದೆ ಅನ್ವಯಿಸಿರಲಿಲ್ಲ. ಈ ಬಗ್ಗೆ ಕಲ್ಕತ್ತಾ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ದಾಖಲಿಸಿ, ಪ್ರಕರಣವನ್ನು ಎನ್.ಐ.ಎ.ಗೆ ವಹಿಸಲು ಮನವಿ ಮಾಡಿಕೊಳ್ಳಲಾಗಿತ್ತು. ನಂತರ ಜೂನ್ 4, 2023ರಲ್ಲಿ ಪ್ರಕರಣವನ್ನು ಎನ್.ಐ.ಎ.ಗೆ ವಹಿಸಲಾಗಿತ್ತು. ತನಿಖೆಯ ವೇಳೆ ಈ ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿರುವುದು ಕಂಡು ಬಂದಿತ್ತು.

**ANMOL PUBLIC SCHOOL**
SHIRAMAGONDANAHALLI, DAVANGERE - 577005

**WANTED**

| Post (Subject) | Qualification |
| --- | --- |
| English | B.A., B.Ed., |
| Hindi | B.A., B.Ed., |
| Mathematics | B.Sc. / M.Sc., B.Ed. |
| Social Science | B.A. / M.A., B.Ed., |
| English | M.A., B.Ed., |
| Science | M.Sc., B.Ed., |
| P.E. Teacher | B.P.Ed. / M.P.Ed. |
| Warden | Any Degree |

The Candidates must have strong communication and interpersonal skills with minimum of 3 years experience. Interested candidates may send their resumes to anmolschool.edu@gmail.com and may also speak to principal on 9844879904 / 7406708010 to fix up the appointment for Interview.

# ಗ್ಯಾರಂಟಿ ಮುಂದಿಟ್ಟು ಮತ ಕೇಳಿದ ಕಾಂಗ್ರೆಸ್



ಬೆಂಗಳೂರು, ಏ. 6 - ಇಪ್ಪತ್ತು ಲೋಕಸಭಾ ಕ್ಷೇತ್ರಗಳನ್ನು ಗೆಲ್ಲುವ ಗುರಿಯೊಂದಿಗೆ ಕಾಂಗ್ರೆಸ್ ಚುನಾವಣಾ ಪ್ರಚಾರಕ್ಕೆ ಭರ್ಜರಿ ಚಾಲನೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮೂಡಣ ಬಾಗಿಲು, ದೇವರ ಮೂಲೆಯೆಂದೇ ಪ್ರಸಿದ್ಧಿ ಪಡೆದಿರುವ ಕೋಲಾರದ ಮುಳುಬಾಗಿಲಿನ ಕುರುಡುಮಲೆ ಗಣೇಶನಿಗೆ ಪೂಜೆ ಸಲ್ಲಿಸುವ ಮೂಲಕ ಪ್ರಜಾಧ್ವನಿ-2 ಯಾತ್ರೆ ಮತ್ತು ಲೋಕಸಭಾ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು.

ಗಣೇಶನಿಗೆ ಪೂಜೆ ಸಲ್ಲಿಸುವುದಕ್ಕೂ ಮುನ್ನ ಸಿದ್ದರಾಮಯ್ಯ, ಸ್ಥಳೀಯ ದರ್ಗಾಕ್ಕೆ ತೆರಳಿ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು. ಏಪ್ರಿಲ್ 26ರಂದು ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ನಡೆಯುತ್ತಿರುವ ಚುನಾವಣೆಗೆ ಇಂದಿನಿಂದಲೇ ಪ್ರಚಾರ ಆರಂಭಿಸಿದ್ದಾರೆ.

ಉಭಯ ನಾಯಕರು ಕೆಲವೆಡೆ ಜಂಟಿ ಪ್ರಚಾರ ಕೈಗೊಂಡರೆ, ಉಳಿದಂತೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಪ್ರತ್ಯೇಕವಾಗಿ ಸಭೆ ಮತ್ತು ರ್‍ಯಾಲಿಗಳಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ.

ಈಗಾಗಲೇ ಕಾರ್ಯಕರ್ತರು ಮತ್ತು ಮುಖಂಡರ ಜೊತೆ ಒಂದು ಸುತ್ತಿನ ಸಭೆ ಮುಗಿಸಿದ್ದು, ಈಗ ರೋಡ್ ಶೋ ಮತ್ತು ಸಮಾವೇಶಗಳ ಮೂಲಕ ಮತದಾರರ ಓಲೈಕೆಗೆ ಮುಂದಾಗಿದ್ದಾರೆ.

ಪ್ರಚಾರ ಭಾಷಣಕ್ಕೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾವು ಕೊಟ್ಟ ಮಾತಿನಂತೆ ನಡೆದುಕೊಂಡು, ನಿಮ್ಮ ಮತಕ್ಕೆ ಘನತೆ ತಂದಿದ್ದೇವೆ, ನಮ್ಮ ಐದು ಗ್ಯಾರಂಟಿಗಳಿಗೂ ಐದು ವರ್ಷ ವಾರೆಂಟಿ ಇದೆ ಎಂದು ಸಮರ್ಥಿಸಿಕೊಂಡರು.

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸಿಲಿಂಡರ್, ರಸಗೊಬ್ಬರ, ಅಡುಗೆ ಎಣ್ಣೆ, ಬೇಳೆ-ಕಾಳು, ತರಕಾರಿ ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆಯಲ್ಲಿ ಭಾರೀ ಏರಿಕೆ ಮಾಡಿದ್ದರಿಂದ ನಾಡಿನ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿದ್ದವು ಎಂದರು.

ಕೇಂದ್ರ ಸರ್ಕಾರದ ಇಂಧನ ದರ ಏರಿಕೆಯಿಂದಾಗಿ ಅಗತ್ಯ ವಸ್ತುಗಳ ಧಾರಣೆ ಹೆಚ್ಚಳದಿಂದ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳಿಗೆ ಸ್ಪಂದಿಸಲು ಐದು ಗ್ಯಾರಂಟಿಗಳನ್ನು ಘೋಷಿಸಿ, ಜಾರಿ ಮಾಡಿದೆವು.

ಗ್ಯಾರಂಟಿಗಳ ಜಾರಿ ಸಾಧ್ಯವೇ ಇಲ್ಲ ಎನ್ನುವ ಸುಳ್ಳನ್ನು ಬಿಜೆಪಿ ಮೊದಲು ಹುಟ್ಟಿಸಿತು, ಗ್ಯಾರಂಟಿಗಳು ಜಾರಿಯಾದ ನಂತರ ಗ್ಯಾರಂಟಿಗಳು ನಿಂತು ಹೋಗುತ್ತವೆ ಎನ್ನುತ್ತಿದೆ ಎಂದರು.

ಸೋಲುವ ಭೀತಿಯಿಂದ ಬಿಜೆಪಿ ಸೃಷ್ಟಿಸುವ ಸುಳ್ಳುಗಳನ್ನು ನಂಬಬೇಡಿ, ಬಿಜೆಪಿ ಸುಳ್ಳಿನ ಕಾರ್ಖಾನೆ, ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಗೆಲ್ಲಿಸಿ ನಿಮ್ಮ ಮತಕ್ಕೆ ಮೌಲ್ಯ ತಂದು ಕೊಡುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ಗೃಹಲಕ್ಷ್ಮಿ ಮಾದರಿಯಲ್ಲಿ ಮಹಾಲಕ್ಷ್ಮಿ ಯೋಜನೆ ಮೂಲಕ ವರ್ಷಕ್ಕೆ ಒಂದು ಲಕ್ಷ ಹಣವನ್ನು ಬಡ ಕುಟುಂಬದ ಮಹಿಳೆಯೊಬ್ಬರಿಗೆ ನೀಡಲಾಗುವುದು, ಯುವಜನರಿಗೆ ವಾರ್ಷಿಕ ಒಂದು ಲಕ್ಷ ರೂ. ಶಿಷ್ಯ ವೇತನ ನೀಡಲಾಗುವುದು, ರೈತರ ಸಾಲ ಮನ್ನಾ, ರೈತರ ಬೆಳೆಗೆ ಬೆಂಬಲ ಬೆಲೆ ನಿಗದಿ, ನರೇಗಾ ಕೂಲಿ 400 ರೂ.ಕ್ಕೆ ಹೆಚ್ಚಳ, 25 ಲಕ್ಷ ರೂ.ವರೆಗೆ ಆರೋಗ್ಯ ವಿಮೆ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳಾಗಿವೆ ಎಂದರು.

## ಮಹಿಳಾ ಸರ್ಕಾರಿ ನೌಕರರಿಂದ ಮತದಾನ ಜಾಗೃತಿ



ದಾವಣಗೆರೆ, ಏ.6- ಲೋಕಸಭಾ ಚುನಾವಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಮಹಾನಗರಪಾಲಿಕೆ ಇವರ ಸಹಯೋಗದಲ್ಲಿ ಶನಿವಾರ ನಡೆದ ಬೈಕ್ ರ್‍ಯಾಲಿಗೆ ಮಹಿಳಾ ಸರ್ಕಾರಿ ನೌಕರರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು.

ರ್‍ಯಾಲಿಯಲ್ಲಿ ಘೋಷಣಾ ವಾಕ್ಯದ ಫಲಕಗಳು ರಾರಾಜಿಸುವ ಜತೆಗೆ ಮತದಾನ ಜಾಗೃತಿ ಮಾಡುತ್ತಿದ್ದವು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ ಮತ್ತು ಜಿ.ಪಂ. ಸಿಇಓ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ. ಇಟ್ನಾಳ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ವಿಧ್ಯುಕ್ತ ಚಾಲನೆ ನೀಡಿದರು.

ಈ ವೇಳೆ ಜಿ.ಪಂ. ಸಿಇಓ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ. ಇಟ್ನಾಳ್ ಮಾತನಾಡಿ, ನಗರದಲ್ಲಿ ಮಹಿಳಾ ಮತದಾರರೇ ಅಧಿಕವಾಗಿದ್ದರೂ ಸಹ ಕಡಿಮೆ ಮತದಾನವಾಗುತ್ತಿದೆ. ಆದ್ದರಿಂದ ಮಹಿಳೆಯರಿಂದಲೇ ಬೈಕ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಮತದಾನ ಪ್ರಜೆಗಳ ಸರ್ವಶ್ರೇಷ್ಠ ಹಕ್ಕು. ಆದ್ದರಿಂದ ಎಲ್ಲರೂ ತಪ್ಪದೇ ಮತ ಚಲಾಯಿಸಬೇಕು ಎಂದು ಮನವಿ ಮಾಡಿದರು.

ಜಾಗೃತಿ ರ್‍ಯಾಲಿಯಲ್ಲಿ 150ಕ್ಕೂ ಅಧಿಕ ಬೈಕ್‌ಗಳು ಸೇರಿದ್ದು, ಹೊಸ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ, ಭಗತ್‌ಸಿಂಗ್ ನಗರ, ಎಚ್.ಕೆ.ಆರ್ ಸರ್ಕಲ್, ದುರ್ಗಾಂಬಿಕಾ ದೇವಸ್ಥಾನದ ಮೂಲಕ ಐ.ಟಿ.ಐ ಗೇಟ್‌ವರೆಗೆ ಸಂಚರಿಸಿ, ಮುಕ್ತಾಯಗೊಂಡಿತು.

ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಹೆಚ್ಚುವರಿ ಪೊಲೀಸ್ ಅಧಿಕಾರಿ ವಿಜಯಕುಮಾರ್ ಎಂ.ಸಂತೋಷ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಪಾಲಿಕೆ ಆಯುಕ್ತೆ ರೇಣುಕಾ ಮತ್ತು ಇತರರು ಇದ್ದರು.

## 9ರಂದು ಕಾಳಿಕಾದೇವಿ ರಥೋತ್ಸವ



ದಾವಣಗೆರೆ, ಏ. 6 - ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 8ರ ಸೋಮವಾರ ಯುಗಾದಿ ಅಮಾವಾಸ್ಯೆ ದಿನದಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ ಮತ್ತು ಗೋಧಿ ಉಡಿ ತುಂಬುವುದು, ನಂತರ ಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗವಿರುತ್ತದೆ.

ದಿನಾಂಕ 9ರ ಮಂಗಳವಾರ ಯುಗಾದಿ ಪಾಡ್ಯದಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಮಂಗಳಾರತಿ, ಸಂಜೆ 6-30ಕ್ಕೆ ಚಾಂದ್ರಮಾನ ಯುಗಾದಿ ಪ್ರಯುಕ್ತ ಶ್ರೀ ಕಾಳಿಕಾದೇವಿ ರಥೋತ್ಸವವನ್ನು ದೇವಸ್ಥಾನದಿಂದ ರಾಜಬೀದಿಗಳಲ್ಲಿ ನೆರವೇರಿಸಲಾಗುವುದು.

ರಥೋತ್ಸವವು ದೇವಸ್ಥಾನಕ್ಕೆ ಬಂದ ನಂತರ ಮಹಾಮಂಗಳಾರತಿ, ಬೇವು-ಬೆಲ್ಲದ ಪ್ರಸಾದವನ್ನು ವಿತರಿಸಲಾಗುವುದು ಎಂದು ಶ್ರೀ ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನ ಆಡಳಿತ ಸಮಿತಿ ಟ್ರಸ್ಟ್ ತಿಳಿಸಿದೆ.

## ಬೆಳ್ಳೂಡಿ ಕನಕ ಗುರು ಪೀಠಕ್ಕೆ ಸಚಿವ ಎಸ್ಸೆಸ್ಸೆಂ ಭೇಟಿ



ದಾವಣಗೆರೆ, ಏ. 6- ಕಾಗಿನೆಲೆ ಕನಕ ಗುರು ಪೀಠದ ಬೆಳ್ಳೂಡಿಯ ಶಾಖಾಮಠಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಇಂದು ಭೇಟಿ ನೀಡಿದ್ದರು. ಶ್ರೀ ಮಠದಲ್ಲಿ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳವರ ಆಶೀರ್ವಾದ ಪಡೆದ ಮಲ್ಲಿಕಾರ್ಜುನ್ ಕೆಲಹೊತ್ತು ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕುರುಬ ಸಮಾಜದ ನಂದಿಗಾವಿ ಶ್ರೀನಿವಾಸ್, ಜಿ.ಸಿ.ನಿಂಗಪ್ಪ ಹದಡಿ, ಬೂದಾಳ್ ಬಾಬು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬೆಳ್ಳೂಡಿ ಬಸವರಾಜ್ ಇದ್ದರು.

## ಸ್ಕೌಟ್ಸ್ - ಗೈಡ್ಸ್ ವಿದ್ಯಾರ್ಥಿಗಳಿಂದ ನದಿ ತೀರ ಸ್ವಚ್ಛತೆ




ದಾವಣಗೆರೆ, ಏ.6- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ವಿದ್ಯಾರ್ಥಿಗಳು ಹರಿಹರ ತುಂಗಭದ್ರಾ ನದಿ ತೀರವನ್ನು ಸ್ವಚ್ಛಗೊಳಿಸಿದರು. ರೋವರ್ ಸ್ಕೌಟ್ ಲೀಡರ್ ಸುರೇಶ್ ಜಿಎಸ್. ಮಾರ್ಗದರ್ಶನದಲ್ಲಿ ವಿಜಯ್ ಕುಮಾರ್ ನಾಯಕತ್ವದಲ್ಲಿ ನಡೆದ ಈ ಸ್ವಚ್ಛತಾ ಕಾರ್ಯದಲ್ಲಿ ರೇಂಜರ್ ಲೀಡರ್ ಡಾ.ದಾಕ್ಷಾಯಿಣಿ, ಡಾ.ಗೌರಮ್ಮ ಮಕ್ಕಳೊಂದಿಗೆ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಪ್ರಭಾಕರ್, ಸಹಾಯಕ ಜಿಲ್ಲಾ ಆಯುಕ್ತ ಎನ್. ಕೆ.ಕೊಟ್ರೇಶ್, ಎಸ್. ಜಿ. ವಿ ಅಶ್ವಿನಿ, ಯುವ ಬ್ರಿಗೇಡ್ ಸಂಚಾಲಕ ಕೆ. ಎಸ್.ಗಜೇಂದ್ರ ಉಪಸ್ಥಿತರಿದ್ದರು.

## ಜಗಳೂರು ತಾ.ನಲ್ಲಿ ಇಂದು ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಪ್ರವಾಸ



ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ|| ಪ್ರಭಾ ಮಲ್ಲಿಕಾರ್ಜುನ್ ಅವರು ಜಗಳೂರು ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಜಗಳೂರು ತಾಲ್ಲೂಕಿನ ಬಸವನಕೋಟೆ, ಗುರುಸಿದ್ದಾಪುರ, ಸೊಕ್ಕೆ ಕ್ಯಾಸೇನಹಳ್ಳಿ, ಹೊಸಕೆರೆ, ಕೆಚ್ಚೇನಹಳ್ಳಿ ಗ್ರಾಮ ಪಂಚಾಯ್ತಿಯ ವಿವಿಧ ಗ್ರಾಮಗಳಲ್ಲಿ ಮತಯಾಚನೆ ಮಾಡುವರು.

ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕ ದೇವೇಂದ್ರಪ್ಪ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಜಗಳೂರು ತಾಲ್ಲೂಕು ಕಾರ್ಯದರ್ಶಿ ಶೇಖರಪ್ಪ ತಿಳಿಸಿದ್ದಾರೆ.

## ಐಎಂಎ ಮಹಿಳಾ ವಿಭಾಗದ ಅಧ್ಯಕ್ಷರಾಗಿ ತ್ರಿವೇಣಿ ಮಲ್ಲೇಶ್



ದಾವಣಗೆರೆ, ಏ. 6- ನಗರದ ಐಎಂಎ ಮಹಿಳಾ ವಿಭಾಗಕ್ಕೆ ಪದಾಧಿಕಾರಿಗಳು ಆಯ್ಕೆಯಾಗಿದ್ದು, ಅಧ್ಯಕ್ಷರಾಗಿ ಶ್ರೀಮತಿ ತ್ರಿವೇಣಿ ಮಲ್ಲೇಶ್, ಉಪಾಧ್ಯಕ್ಷರಾಗಿ ಶ್ರೀಮತಿ ವಿಜಯ ಹಿರೇಮಠ್, ಕಾರ್ಯದರ್ಶಿಯಾಗಿ ಶ್ರೀಮತಿ ಶಿವಪ್ರಭ ದೊಡ್ಡಿಕೊಪ್ಪ, ಸಹ ಕಾರ್ಯದರ್ಶಿಯಾಗಿ ಶ್ರೀಮತಿ ಸುಧಾ ಸತ್ಯನಾರಾಯಣ್, ಖಜಾಂಚಿಯಾಗಿ ಶ್ರೀಮತಿ ವಾಸಂತಿ ಗೋಪಾಲ್ ಪುರ್ ಆಯ್ಕೆಯಾಗಿದ್ದಾರೆ.

## ಹರಿಹರ : ನದಿ ನೀರು ಕುದಿಸಿ, ಆರಿಸಿ ಕುಡಿಯಲು ಸಲಹೆ

ಹರಿಹರ, ಏ. 6 - ನಗರಕ್ಕೆ ಕುಡಿಯುವ ನೀರು ಪೂರೈಕೆಯಾಗುವ ಕವಲೆತ್ತು ಗ್ರಾಮದ ಹತ್ತಿರ ತುಂಗಭದ್ರಾ ನದಿಯ ಜಾಕ್‌ವೆಲ್‌ಗೆ ನೀರು ಬಂದಿದ್ದು, ನದಿಯ ನೀರನ್ನು ಇಂದಿನಿಂದ ಬೆಳಿಗ್ಗೆ 6 ರಿಂದ 24x7 ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯಡಿ ನೀರು ಬಿಡಲಾಗುತ್ತದೆ.

ಸಾರ್ವಜನಿಕರು ಈ ನೀರನ್ನು ಕಡ್ಡಾಯವಾಗಿ ಕುದಿಸಿ-ಆರಿಸಿ ಕುಡಿಯಬೇಕು ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ಯುಗಾದಿ ಅಮಾವಾಸ್ಯೆ



ದಾವಣಗೆರೆ, ಏ. 6 - ನಗರದ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ, ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಯುಗಾದಿ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 8ರ ಸೋಮವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ.

ನಂದಿ ಪೆಟ್ರೋಲ್ ಬಂಕ್ ಮಾಲೀಕ ಟಿ.ಎಸ್. ಜಯರುದ್ರೇಶ್ ಅವರು ಪ್ರಸಾದದ ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 888898) ಬಿ.ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರು ಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಗೃಹಿಣಿ ಸ್ಪರ್ಧೆಯಲ್ಲಿ ಕವಿತಾ ತಿಮ್ಮೇಶ್ ಪ್ರಥಮ



ದಾವಣಗೆರೆ, ಏ.6- ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕಲಾಕುಂಚ ಮಹಿಳಾ ವಿಭಾಗದಿಂದ ನಗರದ ರೋಟರಿ ಬಾಲ ಭವನದಲ್ಲಿ ಮೊನ್ನೆ ಏರ್ಪಡಿಸಿದ್ದ 'ದಾವಣಗೆರೆ ಗೃಹಿಣಿ ಸ್ಪರ್ಧೆ' ಯಲ್ಲಿ ಕವಿತಾ ತಿಮ್ಮೇಶ್ (ಪ್ರಥಮ), ಇಂದಿರಾ ಸಿದ್ದೇಶ್ (ದ್ವಿತೀಯ), ವಿಜಯಲಕ್ಷ್ಮಿ ರಮೇಶ್ ಸಾಳಂಕಿ (ತೃತೀಯ) ಬಹುಮಾನ ಪಡೆದಿದ್ದಾರೆ.

ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ್ ಶೆಣೈ, ಡಿಸಿಎಂ ಶಾಖೆಯ ಅಧ್ಯಕ್ಷರಾದ ಶಾರದಮ್ಮ ಶಿವನಪ್ಪ, ಸಿದ್ದವೀರಪ್ಪ ಬಡಾವಣೆ ಶಾಖೆಯ ಅಧ್ಯಕ್ಷರಾದ ಲಲಿತಾ ಕಲ್ಲೇಶ್, ಹೇಮಾ ಶಾಂತಪ್ಪ ಪೂಜಾರಿ, ಪುಷ್ಪಾ ಮಂಜುನಾಥ್ ಇದ್ದರು.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ ವಿಶೇಷ ಪೂಜೆ



ದಾವಣಗೆರೆ, ಏ. 6- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಯುಗಾದಿ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 8ರ ಸೋಮವಾರ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀ ವಿನಾಯಕ ಸೇವಾ ಸಮಿತಿಯವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ನಾಳೆ ಅಮಾವಾಸ್ಯೆ, ನಾಡಿದ್ದು ಪಾಡ್ಯ, 10 ರಂದು ಚಂದ್ರ ದರ್ಶನ

ದಾವಣಗೆರೆ, ಏ. 6- ನಾಡಿದ್ದು ದಿನಾಂಕ 8 ರ ಸೋಮವಾರ ರಾತ್ರಿ 12.20 ರವರೆಗೆ ಸಂಪೂರ್ಣ ಅಮಾವಾಸ್ಯೆ, 9 ರ ಮಂಗಳವಾರ ರಾತ್ರಿ 10.10 ರವರೆಗೆ ಯುಗಾದಿ ಪಾಡ್ಯ ಇದ್ದು, 10 ರ ಬುಧವಾರ ಸಂಜೆ 6,35 ಕ್ಕೆ ಸಂಪೂರ್ಣ ಚಂದ್ರ ದರ್ಶನ ಇದೇ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.


## 9 ರಂದು ಮಧುಮೇಹಿಗಳಿಗೆ ಉಚಿತ ನೇತ್ರ ತಪಾಸಣೆ ಶಿಬಿರ

ದಾವಣಗೆರೆ,ಏ. 6- ನಗರದ ನೇತ್ರಾಲಯ - ಐ ಕೇರ್ ಸೆಂಟರ್ ಕಣ್ಣಿನ ಆಸ್ಪತ್ರೆಯಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಸಕ್ಕರೆ ಕಾಯಿಲೆ ಇದ್ದವರಿಗೆ ಉಚಿತ ನೇತ್ರ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಇದೇ ದಿನಾಂಕ 9 ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1ರವರೆಗೆ ಉಚಿತ ತಸಾಪಣೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 78924 24162.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಮಾವಿ ಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ. ಸಿ.ಎನ್.ಕೋಟಿಹಾಳ್, ಡಾ. ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣೆ ನಡೆಸುವರು. ಮೊ. : 63631 51534.

## ಕಾಂಗ್ರೆಸ್ ಪ್ರಚಾರ ಸಂಯೋಜಕರಾಗಿ ಟಿ.ಗಣೇಶ್ ನೇಮಕ



ಹರಪನಹಳ್ಳಿ, ಏ. 6- ಹರಪನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಟಿ.ಗಣೇಶ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಶಿಫಾರಸ್ಸಿನ ಮೇರೆಗೆ ಪ್ರಚಾರ ಸಂಯೋಜಕರಾಗಿ ನೇಮಕಗೊಂಡಿದ್ದಾರೆ.

**ರಂಜಾನ್ ರೋಜಾ ಟೈಮ್**

ದಿನಾಂಕ : 07 - 04 - 2024
ಇಫ್ತಾರ್ ಸಮಯ : 6 - 45
ದಿನಾಂಕ : 08 - 04 - 2024
ಸಹೇರಿ ಸಮಯ : 4 - 58







KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas